ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 34 ಆಗಸ್ಟ್ 23, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಕೇರಳದಲ್ಲಿ 700 ಕಿ. ಮಿ. ಉದ್ದದ ಮಾನವ ಸರಪಳಿ

ಚರಿತ್ರಾರ್ಹ ಚಳುವಳಿಯಿಂದ ಯುವಕ ಯುವತಿಯರಲ್ಲಿ ಸ್ವಾತಂತ್ರ್ಯಯೋಧರಲ್ಲಿ ಸಾಹಿತಿ, ಕಲಾವಿದರು, ಚಿತ್ರನಟರಲ್ಲಿ ಚಿಮ್ಮಿದ ಉತ್ಸಾಹದ ಬುಗ್ಗೆ ಸಾಮ್ರಾಜ್ಯಶಾಹಿಗಳಿಗೆ ಸವಾಲು ಆಂತರಿಕ ಶತ್ರುಗಳಿಗೆ ಎಚ್ಚರ.

ಸ್ವಾತಂತ್ರ್ಯ ದಿನಾಚರಣೆಯ ನಲು ವತ್ತನೇಯ ವಾರ್ಷಿಕೋತ್ಸವದಂದು ಕೇರಳದಲ್ಲಿ ಭಾರತ ಯುವಜನ ಫೆಢ ರೇಶನ್ ಕೊಟ್ಟ ಕರೆಯ ಮೇರೆಗೆ ಏರ್ಪಡಿಸಲಾಗಿದ್ದ 'ಮಾನವ ಸರಪಣಿ' ಅಭೂತಪೂರ್ವ ರೀತಿಯಲ್ಲಿ ಯಶಸ್ವಿಯಾಗಿ ಇತಿಹಾಸ ನಿರ್ಮಿಸಿದೆ. ಆರಂಭದಲ್ಲಿ ಮಾನವ ಸರಪಣಿಯೆಂದು ಯೋಜಿಸಲಾಗಿದ್ದ ಕಾರ್ಯಕ್ರಮ ಅದಕ್ಕೆ ದೊರತ ಅಪಾರ ಜನ ಬೆಂಬಲದಿಂದಾಗಿ ವಸ್ತುತ: ಮಾನವಗೋಡೆಯಾಯಿತು. ದೇಶದ ಏಕ್ಯತೆಯನ್ನು ಒಡೆಯಲು ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ನಿರಂತರ ಪ್ರಯತ್ನ ಮತ್ತು ತನ್ನ ದೋಷಪೂರಿತ ಹಾಗೂ ಸಂದರ್ಭ ಸಾಧಕ ನೀತಿಗಳಿಂದಾಗಿ ಕೋಮುವಾರು, ವಿಭಜನವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳಿಗೆ ತಲೆಯೆತ್ತಲು ಅವಕಾಶ ಮಾಡಿಕೊಟ್ಟಿರುವ ಆಳುವ ವರ್ಗಗಳ ಧೋರಣೆಗಳಿಗೆದುರಾಗಿ ಜನತೆಯನ್ನು ಎಚ್ಚರಿಸಲು, ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಲು ಪಣತೊಟ್ಟ ಈ 'ಮಾನವ ಗೋಡೆ' ಭಾರತದಲ್ಲೇ ಮೊತ್ತ ಮೊದಲನೆಯುದು. ಕಾಸರಗೋಡಿನಿಂದ ತಿರುವನಂತಪುರದ ಗಾಂಧಿಪಾರ್ಕ್ ಮೈದಾನದ ವರೆಗೆ ಒಬ್ಬರಿಗೊಬ್ಬರು ಕೈ ಕೈ ಬೆಸೆದುಕೊಂಡು ನಿಂತಿದ್ದ ಈ ಸರಪಣಿಯ ಉದ್ದ 693 ಕಿಲೋಮೀಟರು. ಮುದುಕರು, ಮಕ್ಕಳು, ಯುವಕರು, ಮಹಿಳೆಯರು ಮತ್ತು ಗಾಲಿಕುರ್ಚಿಯಲ್ಲಿ ಕುಳಿತು ಬಂದ ಅಂಗವಿಕಲರೂ ಒಳಗೊಂಡಂತೆ ಈ ಅಭೂತಪೂರ್ವ ಕಾರ್ಯಕ್ರಮದಲ್ಲಿ ಪಾಲುಗೊಂಡ ಜನಗಳ ಸಂಖ್ಯೆ ಹತ್ತು ಲಕ್ಷಕ್ಕೂಮಿಕ್ಕಿತ್ತೆನ್ನಲಾಗಿದೆ. ಕೇರಳದ ರಾಷ್ಟ್ರೀಯ ಹೆದ್ದಾರಿಯಲ್ಲಿ, ಪ್ರಮುಖ ನಗರಗಳ ಮುಖ್ಯರಸ್ತೆಗಳನ್ನು ಹಾಯ್ದು ಸಾಗಿದ ಈ ಅಪೂರ್ವವೆನಿಸಿದ, ಐಕ್ಯತೆ ಮತ್ತು ಬಾಂಧವ್ಯದ ಸಂಕೇತವಾದ ಮಾನವ ಮಹಾಪೂರದಲ್ಲಿ ಪಾಲುಗೊಂಡ ಜನಸಮುದಾಯ ಸುಮಾರು ಅರ್ಧಗಂಟೆಯಕಾಲ ಸರಪಳಿಯಲ್ಲಿ ನಿಂತು ದೇಶದ ಐಕ್ಯತೆಯನ್ನು ಕಾಪಾಡುವ ಪ್ರತಿಜ್ಞೆ ಮಾಡಿದ ದೃಶ್ಯ ಮೈ ನವಿರೇಳಿಸುವಂತಹದು.

ಮಲೆಯಾಳಂನ ಪ್ರಸಿದ್ಧ ಲೇಖಕ ಶ್ರೀ ವೈ. ಕಂ. ಮಹಮ್ಮದ್‌ಬಶೀರ್, ನಾಟಕಕಾರ ಶ್ರೀ ಕೆ.ಟಿ.ಮಹಮ್ಮದ್, ಹಾಲಿ ಹೈಕೋರ್ಟ್ ನ್ಯಾಯಾಧೀಶ

(8ನೇ ಪುಟ ನೋಡಿ)



ಸ್ವಾತಂತ್ರ್ಯದ ರಕ್ಷಣೆಯ ಶಪಥಗೈದ ಕೇರಳದ ಯುವಜನತೆಯಿಂದ 'ಮಾನವ ಸರಪಳಿ'

ದೇಶದ ಮುಂದಿಟ್ಟ 17 ಬೇಡಿಕೆಗಳು

ಆಗಸ್ಟ್ 7ರಿಂದ 10ರವರೆಗೆ ನಡೆಸಿದ ಸಿ.ಪಿ.ಐ. (ಎಂ) ನ ಕೇಂದ್ರಸಮಿತಿಯ ಸಭೆ ರಾಜೀವ್‌ಗಾಂಧಿಯವರ ರಾಜೀನಾಮೆ ಹಾಗೂ ಮಧ್ಯಾವಧಿ ಚುನಾವಣೆಗಾಗಿ ಒತ್ತಾಯಿಸಲು, ಅದರ ಜೊತೆಗೇ 1983 84 ರಲ್ಲಿ ಶ್ರೀನಗರ ಹಾಗೂ ಕಲ್ಕತ್ತಾದಲ್ಲಿ ನಡೆದ ವಿರೋಧ ಪಕ್ಷಗಳ ಸಮಾವೇಶಗಳುಮುಂದಿಟ್ಟ ಬೇಡಿಕೆಗಳನ್ನು ಹಾಗೂ ಇತರತುರ್ತಿನ ಬೇಡಿಕೆಗಳಿಗಾಗಿ ಒತ್ತಾಯಿಸಲು ಒಂದು ಚಳುವಳಿ ಆರಂಭಿಸಬೇಕೆಂದು ಎಡ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಪಕ್ಷಗಳಿಗೆ ಕರೆನೀಡಿತು ಎಂಬುದನ್ನು ಕಳೆದ ಸಂಚಿಕೆಯಲ್ಲಿ ಓದಿದ್ದೇವೆ. ಆ ಬೇಡಿಕೆಗಳು ಹೀಗಿವೆ.

1. ಅಲಿಪ್ತ ವಿದೇಶಾಂಗ ನೀತಿಯನ್ನು ಬಲಗೊಳಿಸಬೇಕು.

2. ಜಾತ್ಯಾತೀತತೆಯ ರಕ್ಷಣೆ, ಎಲ್ಲಾ ಸ್ವರೂಪದ ಕೋಮುವಾದಗಳ ವಿರುದ್ಧ ಹೋರಾಟ; ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಿ ದೇಶದ ಐಕ್ಯತೆಯ ರಕ್ಷಣೆ.

3. ಉಚ್ಛಸ್ಥಾನಗಳಲ್ಲಿನ ಭ್ರಷ್ಟಾಚಾರದ ಆಮೂಲಾಗ್ರ ವಿಚಾರಣೆ ನಡೆಸಿ ಅದನ್ನು ತೊಲಗಿಸಬೇಕು. ವಿದೇಶಗಳಿಗೆ ಕಾನೂನು ಬಾಹಿರವಾಗಿ ಹಣ ಹರಿದು ಹೋಗುವುದನ್ನು ತಡೆಯಬೇಕು. ಕಪ್ಪು ಹಣವನ್ನು ಪತ್ತೆಹಚ್ಚಿ ಹೊರ ಗೆಳೆಯಬೇಕು.

4. ಕೇಂದ್ರದ ಮತ್ತು ರಾಜ್ಯಗಳ ಅಧಿಕಾರಗಳಲ್ಲಿ ಸಮತೋಲನ ತಂದು, ದೇಶದ ಐಕ್ಯತೆಯನ್ನು ಬಲಪಡಿಸಲು ರಾಜ್ಯಗಳ ಸ್ವಾಯತ್ತತೆಯನ್ನು ಬಲಪಡಿಸಬೇಕು.

ರಾಜ್ಯಪಾಲರ ಪಾತ್ರ ಮತ್ತು 365ನೇ ಕಲಮಿನ ದುರುಪಯೋಗ ತಡೆಯಲು ಸಂವಿಧಾನಕ್ಕೆ ಅವಶ್ಯಕ ತಿದ್ದುಪಡಿತಂದು, ರಾಜ್ಯಗಳಿಗೆ ರಾಷ್ಟ್ರೀಯ ಸಂಪನ್ಮೂಲಗಳ ನ್ಯಾಯಬದ್ಧ ಪಾಲು ದೊರೆಯುವಂತಾಗಲು ಕೇಂದ್ರ ಮತ್ತು ರಾಜ್ಯಗಳ ನಡುವಿನ ವ್ಯವಸ್ಥೆಯನ್ನು ಸುಧಾರಿಸಿ ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್ರಚಿಸಬೇಕು.

5. ಸಗಟು ವ್ಯಾಪಾರಿಗಾರರ ಲಾಭಕೋರತನವನ್ನು ತೀವ್ರವಾಗಿ ತಡೆದು, ಒಂದು ಸಮಗ್ರ ಸಾರ್ವಜನಿಕ ವಿತರಣಾವ್ಯವಸ್ಥೆ ರೂಪಿಸಿ ಬಳಕೆದಾರರಿಗೆ ನ್ಯಾಯಬೆಲೆಯಲ್ಲಿ ಜೀವನಾವಶ್ಯಕ ವಸ್ತುಗಳು ಸಿಗುವಂತೆ ಕೇಂದ್ರ ಸರ್ಕಾರ ವ್ಯವಸ್ಥೆ ಮಾಡಬೇಕು. ಹೀಗಾಗ ಬೇಕಾದರೆ ಉತ್ಪಾದನೆಯ ಆದ್ಯತೆಗಳನ್ನು ಬಡ ಮತ್ತು ಮಧ್ಯಮ ವರ್ಗಗಳ ಅವಶ್ಯಕತೆಗಳಿಗನುಗುಣವಾಗಿ ಬದಲಿಸಿ, ಪ್ರಮುಖ ಆಹಾರ ಧಾನ್ಯಗಳು,

[8ನೇ ಪುಟ ನೋಡಿ]

ವಿಶ್ವಶಾಂತಿ ದಿನ, ಸೆಪ್ಟೆಂಬರ್—1

ಕಳೆದ ಎರಡು ವಾರಗಳ ದಿನ ಪತ್ರಿಕೆಗಳಲ್ಲಿ ಅಮೇರಿಕ ಸಂಯುಕ್ತ ಸಂಸ್ಥಾನಗಳ ಯುದ್ಧ ನೌಕೆಗಳ ಮಧ್ಯೆ ಪ್ರಾಂಚ್ಯ ದೇಶಗಳ ವಿವಾದಕ್ಕೆ ಸಂಬಂಧಿಸಿದ್ದೆಂಬ ನೆಪವೊಡ್ಡಿ ಅರಬ್ಬೀ ಸಮುದ್ರಕ್ಕೆ ಬರುತ್ತಿರುವ ಸುದ್ಧಿ ಪ್ರಕಟವಾಗಿದೆ. ಅಣ್ವಸ್ತ್ರ ಸಜ್ಜಿತವಾದ ಯುದ್ಧ ನೌಕೆಗಳು, ಕ್ಷಿಪಣಿಗಳು, ಬಾಂಬರುಗಳು ದೊಡ್ಡ ಪ್ರಮಾಣದಲ್ಲಿ ಒಂದು ತಿಂಗಳಿನ ಅಂತ್ಯದ ಒಳಗಾಗಿ ಬಂದು ಡಿಯಾಗೊಗಾರ್ಸಿಯದಲ್ಲಿ ನೆಲೆಯೂರುವುದಾಗಿಯೂ, ವಿಯ... ಯುದ್ಧದ ನಂತರ ಇಷ್ಟು ದೊಡ್ಡ ಪ್ರಮಾಣದಲ್ಲಿ ಅಮೇರಿಕ ಸಾಮ್ರಾಜ್ಯಶಾಹಿಗಳ ಯುದ್ಧ ನೌಕೆಗಳು ಒಂದು ಪ್ರದೇಶಕ್ಕೆ ಬರುತ್ತಿರುವುದು ಇದೇ ಮೊದಲು ಎಂದು ವರದಿಯಾಗಿದೆ. ಡಿಯಾಗೋಗಾರ್ಸಿಯಾದಿಂದ ಕ್ಷಿಪಣಿಗಳನ್ನು ಉಡಾಯಿಸಿ ಭಾರತದ ಯಾವುದೇ ಊರನ್ನೂ ಪ್ರದೇಶವನ್ನೂ ಭಸ್ಮ ಮಾಡಬಹುದು. ಅಣುಯುದ್ಧದ ಅಪಾಯವು ಈಗ ಭಾರತದ ಬಾಗಿಲನ್ನೇ ಸಮೀಪಿಸಿಬಹುದು.

ಈ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 1ರ ಶಾಂತಿ ದಿನಾಚರಣೆಯು ಈಗ ಹೆಚ್ಚು ಪ್ರಸಕ್ತವಿದೆ. ಐದು ವರ್ಷಗಳ ಹಿಂದೆ

ಸಿ. ನಂಜುಂಡಪ್ಪ

ಸಮಾಜವಾದಿ ಕ್ಯೂಬದ ರಾಜಧಾನಿ ಹವಾನಾದಲ್ಲಿ ನಡೆದ ಜಾಗತಿಕ ಕಾರ್ಮಿಕ ಸಂಘಗಳ ಹತ್ತನೆಯ ಅಧಿವೇಶನ ಕರೆಕೊಟ್ಟಂದಿನಿಂದ ಪ್ರತಿವರ್ಷ ಪ್ರಪಂಚದಾದ್ಯಂತ ಸೆಪ್ಟೆಂಬರ್ ಒಂದರಂದು "ಶಾಂತಿಗಾಗಿ ಕಾರ್ಮಿಕ ಸಂಘಗಳ ಅಂತರರಾಷ್ಟ್ರೀಯ ದಿನ"ದ ಆಚರಣೆ ಮಾಡುತ್ತ ಚಳುವಳಿ ನಡೆಸುತ್ತಾ ಬಂದಿದೆ. ಪಕ್ಷ ಪಂಗಡಗಳ ಭೇದವಿಲ್ಲದೆ ಕಾರ್ಮಿಕಸಂಘಗಳು, ಪ್ರಜಾಸತ್ತಾತ್ಮಕ ಪಕ್ಷಗಳು, ಜಾಗತಿಕ ಶಾಂತಿ ಚಳುವಳಿ

[8ನೇ ಪುಟ ನೋಡಿ]

ಪುಟ 2 ಐಕ್ಯರಂಗ ಆಗಸ್ಟ್ 23, 1987

ಸಾಮಾಜಿಕ ಪಿಡುಗುಗಳು ಮತ್ತು ಮಹಿಳೆಯರ ಹೋರಾಟ

- ಹರಿಣಿಕಕ್ಕೇರಿ

ಹತ್ತೊಂಬತ್ತನೇ ಶತಮಾನದಿಂದೀಚೆಗೆ ಮಹಿಳೆಯ ಶೋಷಣೆಯ ಕುರಿತು ಚಿಂತನೆ, ತರ್ಕ, ವಾದಗಳನ್ನು ನಡೆಸಿದಷ್ಟು, ಇತಿಹಾಸದ ಯಾವುದೊಂದು ಶತಮಾನವು ನಡೆಸಿಲ್ಲ. ಸಹಸ್ರ ಸಹಸ್ರ ವರುಷಗಳಿಂದ ಮಹಿಳೆ, ಮುಖವಿಲ್ಲದ ಮುಂಡವಾಗಿ, ವರ್ಗ ಸಮಾಜದ ಗುಲಾಮಳಾಗಿ, ಪುರುಷನಿಗೆ ಅಧೀನಳಾಗಿ, ಮಾಂಸದ ಮುದ್ದೆ ಮಾತ್ರವಾಗಿ, ಇತಿಹಾಸದ ಗತಿಕ್ರಮದ ಸಂದುಗೊಂದುಗಳಲ್ಲಿ ದಾರಿ ಮಾಡಿಕೊಂಡು ತೆವಳುತ್ತಾ ಬಂದಿದ್ದಾಳೆ. ಮಹಿಳೆಯ ಈ ದಾರುಣ ಗತಿಗೆ ಕಾರಣ-ಪರಿಹಾರಗಳನ್ನು ಹಲವಾರು ತಜ್ಞರು ನೀಡಿದ್ದಾರೆ.

ಸಮಾಜದ ಮೊದಲ ಘಟ್ಟಗಳಲ್ಲಿ ಸ್ತ್ರೀ-ಪುರುಷರ ಸಂಬಂಧ ಈಗಿನಂತಿರಲಿಲ್ಲ. ಸ್ತ್ರೀಯೂ ಪುರುಷನಷ್ಟೇ ಪ್ರಧಾನಳಾಗಿದ್ದಳು, ಮನೆಯ ಹೊರಗೆ ಬೇಟೆಯಾಡುವ, ಆಹಾರ ಹುಡುಕುವ ಕೆಲಸ ಗಂಡಿನದಾಗಿದ್ದರೆ, ಮನೆಯ ಒಳಗಿನ ಕೆಲಸಗಳನ್ನು ಹೆಂಗಸು ಮಾಡುತ್ತಿದ್ದಳು, ಎರಡೂ ಕೆಲಸಗಳಿಗೂ ಸಮಾನ ಪ್ರಾಧಾನ್ಯವಿತ್ತು.

ಆಹಾರದ ಹುಡುಕಾಟದಲ್ಲಿ ತೊಡಗಿದ್ದ ಗಂಡು ಆಯುಧಗಳನ್ನು ಕಂಡುಹಿಡಿದ ವ್ಯವಸಾಯ ಆರಂಭವಾದ ಹೊಸತರದಲ್ಲಿ ಹೆಂಗಸರೂ ಅದನ್ನು ಮಾಡುತ್ತಿದ್ದರು. ಜೊತೆಗೆ ಪಶು ಸಂಗೋಪನೆಯನ್ನು ಮಾಡುತ್ತಿದ್ದರು. ಆದ್ದರಿಂದ ಅವರಿಗೆ ಸಮಾನ ಸ್ಥಾನಮಾನ ಸಿಗುತ್ತಿತ್ತು.

ಆದರೆ ಮಧ್ಯ ಯುಗದಲ್ಲಿ, ಮುಂದುವರಿದ ಬೇಸಾಯ ಪದ್ಧತಿ, ಗುಲಾಮಗಿರಿಯ ಪದ್ಧತಿ ಹೆಂಗಸರು ಉತ್ಪಾದನೆಯಲ್ಲಿ ಭಾಗವಹಿಸಲು ಅಡ್ಡಿಗಳಾದವು. ಕೆಲಸ ಮಾಡಿಸಲು ಸಾಕಷ್ಟು ಗುಲಾಮರೂ ಮತ್ತು ಬೇಸಾಯದಲ್ಲಿ ಹೆಚ್ಚು ಉತ್ಪನ್ನದ ಜೊತೆಗೆ ಭೂಮಿಯ ಒಡೆತನವನ್ನೂ ಸಂಪಾದಿಸಿದ ಗಂಡಸರ ಸ್ಥಾನ ಬಲಗೊಂಡಿತು. ಗಂಡಸರು ಕಾರ್ಯಕ್ಷೇತ್ರದಲ್ಲಿ ಸುಧಾರಿತ ಉತ್ಪಾದನಾ ಸಲಕರಣೆಗಳಿಂದ ಉತ್ಪಾದನಾ ಸಾಮರ್ಥ್ಯ ಹೆಚ್ಚುತ್ತಾ ಹೋಯಿತು. ಆಗಲೇ ಪ್ರಾರಂಭವಾದ ಜಾತಿ ಪದ್ಧತಿಯಿಂದಾಗಿ ಕೆಳ ಜಾತಿಯವರನ್ನು ತಮ್ಮ ಕೆಲಸಕ್ಕೆ ಬಳಸುತ್ತಿರುವ ಗಂಡಸರಿಗೆ, ಹೆಂಗಸು ತಮ್ಮೊಡನೆ ಕೆಲಸ ಮಾಡುವ ಅವಶ್ಯಕತೆ ಕಾಣದೆ ಅವರನ್ನು ಉತ್ಪಾದನಾ ಕ್ಷೇತ್ರದಿಂದ ಬೇರ್ಪಡಿಸಲು ಕಾರಣವಾಯಿತು. ಇದರಿಂದ ಅಡಿಗೆ ಮನೆಯ ಪಟ್ಟ ಮಹಿಳೆಯರಿಗೆ ಭದ್ರವಾಯಿತು. ಯಾವುದೇ ಬದಲಾವಣೆಗಳನ್ನು ಹೊಂದದ ಮನೆಯ ಹೊರಗೆ ಬೆಳೆದು ನಿಂತ ಉತ್ಪಾದನಾ ಸಲಕರಣೆಗಳು ಮತ್ತು ಹೆಚ್ಚುವರಿ ಉತ್ಪನ್ನ ಗಂಡಿನ ಆಸ್ತಿಗಳಾದವು. ಈ ಒಂದು ಅಸಮಾನ ಬೆಳವಣಿಗೆಗಳಿಂದಾಗಿ ಮಹಿಳೆ ಮತ್ತು ಪುರುಷರ ನಡುವಿನ ಸಂಬಂಧಗಳಲ್ಲಿ ಬದಲಾವಣೆಗಳುಂಟಾದವು.

ಈ ಮೇಲಿನ ವ್ಯವಸ್ಥೆ, ಸಮಾಜದಲ್ಲಿಯ ಆಸ್ತಿ ಸಂಚಯನದ ವ್ಯವಸ್ಥೆ, ಆಸ್ತಿಹೊಂದಿದ [ಭೂಮಿಯ ಒಡೆತನ] ಮತ್ತು ಆಸ್ತಿ ಹೊಂದದ ವ್ಯಕ್ತಿಗಳ ನಡುವಿನ ಭೇದಭಾವ, ಅಧೀನಗೊಳಿಸಿಕೊಳ್ಳುವ ಮತ್ತು ಅಧೀನಕ್ಕೊಳಗಾದ, ದುಡಿಸಿಕೊಳ್ಳುವ ಮತ್ತು ದುಡಿಯುವ ಶೋಷಕರ ಮತ್ತು ಶೋಷಣೆಗೊಳಗಾದಂತಹ ಎರಡು ವರ್ಗಗಳ ಸಾಮಾಜಿಕ ವ್ಯವಸ್ಥೆಯು, ಪುರುಷ, ಮಹಿಳೆಯರಲ್ಲಿಯೂ [ಆಸ್ತಿ ಹಕ್ಕಿನ ಮೇಲೆಯೇ ಸ್ಥಾನ-ಮಾನಗಳು ಅವಲಂಬಿಸಲ್ಪಟ್ಟು] ಭೇದ ಭಾವಗಳು ಮತ್ತು ಅಸಮಾನತೆ ಉಂಟು ಮಾಡಿತು.

ಇದರಿಂದುಂಟಾದ ಸಾಮಾಜಿಕ ಮೌಲ್ಯಗಳು, ಹಲವುಸಾಮಾಜಿಕ ವಿಕಾರಗಳ, ಪಿಡುಗುಗಳ ಹುಟ್ಟಿಗೆ ಕಾರಣವಾಯಿತು.

ಉತ್ಪಾದನಾ ಕ್ಷೇತ್ರದಲ್ಲಿಯ ಪಾಲ್ಗೊಳುವಿಕೆಯ ಅವಕಾಶಗಳಿಂದ ವಂಚಿತಳಾದ ಸ್ತ್ರೀ, ಪುರುಷನ ಮೇಲೆ ಆರ್ಥಿಕವಾಗಿ ಅವಲಂಬಿತಳಾದ ಕಾರಣ ಅವಳ ಸ್ವಂತ ಅಸ್ತಿತ್ವವನ್ನು ಕಳೆದುಕೊಂಡಳು, ನಿರುಪಯುಕ್ತವೆನಿಸುವ ಮನೆ ಕೆಲಸಕ್ಕೆ ಸೀಮಿತವಾದುದರಿಂದ, ಕೇವಲ ಗುಲಾಮಳಾಗಿ, ಭೋಗವಸ್ತುವಾಗಿ ಪರಿಗಣಿಸಲ್ಪಟ್ಟಳು.

'ನ ಸ್ತ್ರೀ ಸ್ವಾತಂತ್ರ್ಯಮ್ ಅರ್ಹತಿ' ಎಂಬತಹ ಶ್ಲೋಕಗಳ ಮೂಲಕ ಈ ಬೆಳವಣಿಗೆಗೆ ಧರ್ಮದ ಮುದ್ರೆಯನ್ನು ಒತ್ತಿದರು. ಪಾತಿವ್ರತ್ಯದ ಪಟ್ಟಕಟ್ಟಿ ಬಾಲ್ಯ ವಿವಾಹ, ಬಹುಪತ್ನಿತ್ವ, ಸತಿ ಪದ್ಧತಿ, ವಿಧವೆಯರ ಮೇಲಿನ ಕಟ್ಟುಪಾಡುಗಳು, ವಿದ್ಯಾಭ್ಯಾಸದಿಂದ ವಂಚನೆಗಳೇ ಮುಂತಾದವು ಧರ್ಮಸಮ್ಮತವಾಯಿತು.

ಒಂದೆಡೆ ಸೀತೆ-ಸಾವಿತ್ರಿಯರ ಬಗ್ಗೆ ಹೇಳುತ್ತಾ, ಹೆಣ್ಣನ್ನು ಕ್ಷಮಯಾ ಧರಿತ್ರೀ, ತ್ಯಾಗಗಳ, ವಿನಯ ಲಜ್ಜೆ, ನಾಜೂಕುಗಳಂತಹ ಕಲ್ಯಾಣ ಗುಣಗಳ ಖಣಿಯೆಂದು ವರ್ಣಿಸಿ ಮಹಿಳೆಯನ್ನು ದೇವತೆಯನ್ನಾಗಿಸಿ ಪೂಜಿಸಿದರೆ ಇನ್ನೊಂದೆಡೆ ಮಾನವ ಜಾತಿಗೇ ಅಗೌರವವಾದ ದೇವದಾಸಿ, ರಾಜನರ್ತಕಿ, ಮತ್ತು ವೇಶ್ಯೆಯರನ್ನು ಹುಟ್ಟುಹಾಕಿ ಮಹಿಳೆಯನ್ನು ಸರ್ವನಾಶಿನಿ, ಮಾಯಾಂಗಿನಿ, ಅವಳಿಂದಲೇ ಕಲಹಗಳೆಂದು, ಹೊನ್ನು ಮತ್ತು ಮಣ್ಣುಗಳಿಗೆ ಅವಳನ್ನು ಸಮಾನಾಂತರಿಸಿದರೇ ಹೊರತು, ಎಲ್ಲೂ ಆಕೆಯನ್ನು ಒಬ್ಬ ಮಾನವಳಾಗಿ ವ್ಯಕ್ತಿಯಾಗಿ ನೋಡುವುದು ಕಂಡು ಬರುವುದಿಲ್ಲ. ಆಯಾ ಕಾಲಘಟ್ಟಗಳಲ್ಲಿ, ಈ ಎಲ್ಲದರ ವಿರುದ್ಧ, ಅಲ್ಲಲ್ಲಿ ಜನತೆಯಿಂದ ಸಾಕಷ್ಟು ಪ್ರತಿಭಟನೆ ಬಂದರೂ, ಅವನ್ನು ಆಯಾ ಘಟ್ಟದ ಆಳುವ ವರ್ಗದವರು ಈ ವಿರೋಧಗಳನ್ನು ಯಶಸ್ವಿಯಾಗಿ ಮೆಟ್ಟಿ ಹಾಕಿದರು.

ಗಂಡು-ಹೆಣ್ಣುಗಳ, ನಡುವೆ ಪರಸ್ಪರ ಸಮಾನತೆಯ ಆರೋಗ್ಯಕರ ಸಂಬಂಧ ಸಾಧಿಸಲು ಸಾಧ್ಯವಾಗಿಲ್ಲ.

ಸಾಮಾಜಿಕ ಪಿಡುಗುಗಳು

ಈ ಎಲ್ಲಾ ಚಾರಿತ್ರಿಕ ಹಿನ್ನೆಲೆಯ ಕಾರಣಗಳಿಂದಾಗಿ ಇಪ್ಪತ್ತೊಂದನೇ ಶತಮಾನಕ್ಕೆ ಕಾಲಿಡುವ ಸಂದರ್ಭದಲ್ಲಿಯೂ ಕೆಲವೇ ಸುಧಾರಣೆಗಳು ಆದುದನ್ನು ಬಿಟ್ಟರೆ, ಮಹಿಳೆ ಇಡಿಯಾಗಿ ಸ್ವಾತಂತ್ರ್ಯ ಸಮಾನತೆಗಳನ್ನು ಸಾಧಿಸಿ ವಿಮೋಚನೆಯನ್ನು ಹೊಂದಿಲ್ಲ. ಈ ಮಾತು ಅನೇಕ ಸಾಮಾಜಿಕ ಪಿಡುಗುಗಳಿಗೆ ಈಕೆ ತುತ್ತಾಗುತ್ತಿರುವುದನ್ನು ನೋಡಿದಾಗ ಸ್ಪಷ್ಟವಾಗುತ್ತದೆ.

ದೇವದಾಸಿ ಪದ್ಧತಿ

ಧಾರ್ಮಿಕ ಮೂಢನಂಬಿಕೆಗಳಿಗೆ ಒಳಗಾಗಿ ಮಹಿಳಾ ಜನಾಂಗಕ್ಕೆ ಅಗೌರವವನ್ನು ಉಂಟು ಮಾಡುವ ಅತ್ಯಂತ ಕೀಳಾದ ಪಿಡುಗೆಂದರೆ 'ದೇವದಾಸಿ' ಪದ್ಧತಿ, ದೇವರ ಹೆಸರಿನಲ್ಲಿ ಮಹಿಳೆಯರನ್ನು ಸಮಾಜದ ದಾಸಿಯನ್ನಾಗಿ ಬಿಡುವ, ಜೋಗತಿಯಾಗಿಸುವ, ಬಸವಿ ಬಿಡುವ ಇತ್ಯಾದಿಗಳು, ಬಡತನದಿಂದಾಗಿ ಒಬ್ಬ ಮಹಿಳೆ ವೇಶ್ಯೆಯಾಗುವುದಕ್ಕಿಂತ ಇದು ಹೇಯವಾದ ಕೆಲಸ. ಇಂಥ ಧಾರ್ಮಿಕ ನಂಬುಗೆಗಳು ಎಷ್ಟು ಆಳವಾಗಿ ಬೇರು ಬಿಟ್ಟವೆಯೆಂದರೆ

ಒಂದೆಡೆ ಪಾಳೇಗಾರೀ ಮೌಲ್ಯಗಳನ್ನು ಪ್ರತಿಬಿಂಬಿಸುವ ಸಂಸ್ಕೃತಿ ಬಂಡವಾಳಶಾಹೀ ಸಂಸ್ಕೃತಿ ಒಂದೆಡೆ. ಇವು ಉಂಟುಮಾಡಿರುವ ಸಾಮಾಜಿಕ ಪಿಡುಗುಗಳೇನು, ಅವುಗಳ ವಿರುದ್ಧ ಮಹಿಳೆಯರ ಸಂಘಟಿತ ಹೋರಾಟ ಏಕೆ, ಹೇಗೆ? ಎಂಬುದು ಹರಿಣಿಕಕ್ಕೇರಿ ವಿವರಿಸುತ್ತಾರೆ.

ನಮ್ಮ ಕರ್ನಾಟಕದ ಚಂದ್ರಗುತ್ತಿಯಲ್ಲಿ ನಡೆಯುವ ಬೆತ್ತಲೆ ಸೇವೆಯನ್ನು ತಡೆಯಲು ಇತ್ತೀಚೆಗೆ ನಡೆಯುತ್ತಿರುವ ಪ್ರಯತ್ನಗಳನ್ನು ನಿರಂತರವಾಗಿ ವಿರೋಧಿಸುತ್ತಿರುವ ಉದಾಹರಣೆಯೊಂದೇ ಸಾಕು. ತಮ್ಮ ನಂಬಿಗೆಯ ಮೂಲಗಳನ್ನು ಪ್ರಶ್ನಿಸುವ ಗೋಜಿಗೆ ಹೋಗದೆ ಯಥಾ ಸ್ಥಿತಿವಾದಿಗಳಾಗಿರುವುದರಿಂದ ಮಹಿಳೆಯ ಪರಿಸ್ಥಿತಿ ಇನ್ನೂ ಶೋಚನೀಯವಾಗಿದೆ. ದೇವರಿಗೆ ಹರಕೆ ಕಟ್ಟಿದರೆ ಅಥವಾ ಬಲಿ ಕೊಟ್ಟರೆ ಕಾಯಿಲೆ ಕಸಾಲೆಗಳು, ಕಷ್ಟ ಕಾರ್ಪಣ್ಯಗಳು ಪರಿಹಾರವಾಗುತ್ತವೆ ಎಂದು ಅಮಾಯಕರಾದ ನಮ್ಮ ಮಹಿಳೆಯರು ನಂಬಿಸಲ್ಪಡುತ್ತಾರೆ. ವಾಸ್ತವಾಗಿ ತನ್ನ ತೊಂದರೆಗಳಿಗೆ ಮೂಲ ಕಾರಣ ಏನು? ಎಂದು ವೈಜ್ಞಾನಿಕವಾಗಿ ಅವಳು ಯೋಚಿಸಲು ಆರಂಭಿಸಿದರೆ, ಈ ನಂಬಿಕೆ ಎಷ್ಟು ಅರ್ಥಹೀನ ಎಂಬುದು ಆಕೆಗೇ ಗೊತ್ತಾಗುತ್ತದೆ. ಅವಳ ಈ ಶೋಷಣೆಗೆ ಆಕೆಯ ಅಜ್ಞಾನ ಭೀತಿಗಳೇ ಮೂಲ ಕಾರಣ. ಇದರಿಂದಾಗಿಯೇ ಅಸ್ಪೃಶ್ಯತೆ, ಜಾತಿಭೇದಗಳಂತಹ ಪಿಡುಗುಗಳಿಂದ ಆಕೆ ಇನ್ನೂ ಹೊರಬರಲು ಸಾಧ್ಯವಾಗಿಲ್ಲ.

ಬಾಲ್ಯ ವಿವಾಹ

ಬಾಲ್ಯ ವಿವಾಹವನ್ನು ಕಾನೂನು ಬಾಹಿರವೆಂದು ಬ್ರಿಟಿಷರ ಆಳ್ವಿಕೆಯ ಕಾಲದಲ್ಲೇ ಘೋಷಿಸಿದ್ದರೂ ಕಾಯ್ದೆ ಮಾಡಿದರೂ, ಇಂದಿಗೂ ಬಾಲ್ಯವಿವಾಹಗಳು ನಡೆದು ಅವರ ಭವಿಷ್ಯವನ್ನು ಕತ್ತಲಾಗಿಸುತ್ತಲಿವೆ. ಬಹುಪತ್ನಿತ್ವ ಕಾನೂನು ಬಾಹಿರವಾಗಿದ್ದರೂ, ಧರ್ಮಸಮ್ಮತಿಯ ಅವಕಾಶವಿದ್ದುದರಿಂದ ಒಂದು ಪಿಡುಗಾಗಿ ಎಲ್ಲ ಧರ್ಮದ ಮಹಿಳೆಯನ್ನು ಇಂದಿಗೂ ಕಾಡುತ್ತಿದೆ. ಇತ್ತೀಚೆಗಿನ ಶಾಬಾನು ಪ್ರಕರಣ ಮತ್ತು ನಂತರ ಬಂದ 'ಮುಸ್ಲಿಮ್ ಮಹಿಳೆಯ ರಕ್ಷಣಾ ಕಾಯ್ದೆ' (ಮುಸ್ಲೀಮ ಊಮನ್ ಪ್ರೊಟೆಕ್ಷನ್ ಬಿಲ್) ಮಹಿಳೆಯರ ಸ್ಥಿತಿಯನ್ನು ಹದಿನಾಲ್ಕನೇ ಶತಮಾನದಷ್ಟು ಹಿಂದೆ ಒಯ್ದ ಸಂದರ್ಭವನ್ನು ನಾವು ಮರೆಯುವಂತಿಲ್ಲ. ಇಂತಹ ಕಾನೂನುಗಳ ಪರಿಣಾಮವಾಗಿ ವಿವಾಹ ವಿಚ್ಛೇದನಕ್ಕೊಳಗಾದ ಅಸಂಖ್ಯಾತ ಮುಸ್ಲಿಂ ಮಹಿಳೆಯರು ಜೀವನೋಪಾಯದ ದಾರಿ ಕಾಣದೆ ಅನಿವಾರ್ಯವಾಗಿ ವೇಶ್ಯೆಯರಾಗಬೇಕಿದೆ.

ವರದಕ್ಷಿಣೆ

ವರದಕ್ಷಿಣೆಯಂಥ ಸಾಮಾಜಿಕ ಪಿಡುಗು ಕಾನೂನು ಬಾಹಿರವಾಗಿದ್ದರೂ ಅದರ ಬೇರುಗಳು, ಬಹಳ ಆಳವಾಗಿವೆ. ವರದಕ್ಷಿಣೆ ಇಲ್ಲದೆ ಮದುವೆಯೇ ನಿಂತು ಹೋದ ಪ್ರಸಂಗಗಳು, ಎಲ್ಲೆಲ್ಲೂ ನಡೆಯುತ್ತಿವೆ. ವರದಕ್ಷಿಣೆ ವಿರೋಧ ಕಾನೂನುಗಳನ್ನು ಸರಿಯಾಗಿ ಅರ್ಥೈಸಿ ಜಾರಿಗೊಳಿಸುವ ಜಾಗೃತಿ ಸಮಾಜದಲ್ಲಿ ಮೂಡಿ ಬಂದರೆ ಮಾತ್ರ ಈ ಪಿಡುಗುಗಳನ್ನು ನಿವಾರಿಸಬಹುದು.

ಈ ಎಲ್ಲ ಕಾರಣಗಳಿಂದ ಮಹಿಳೆಯನ್ನು ಒಂದು ಹೊರೆಯಾಗಿ ಭಾವಿಸಿರುವ ಸಮಾಜವು ತಾಯಿಯ ಗರ್ಭದಲ್ಲಿನ ಹೆಣ್ಣು ಭ್ರೂಣವನ್ನು ಹತ್ಯೆಮಾಡುವ ಅಮಾನುಷ ಕೃತ್ಯಕ್ಕೂ ಹಿಂಜರಿಯುತ್ತಿಲ್ಲ.

ಈ ಎಲ್ಲಾ ಪಾಳೇಗಾರಿ ಮೌಲ್ಯಗಳನ್ನು ಪ್ರತಿಬಿಂಬಿಸುವ ಸಂಸ್ಕೃತಿ ಒಂದೆಡೆಯಾದರೆ, ಮಹಿಳೆಯನ್ನು ಒಂದು ಮಾರಾಟದ ವಸ್ತುವಾಗಿ, ಸರಕಾಗಿಸಿ, ಲೈಂಗಿಕ ವಸ್ತುವಾಗಿ ಚಿತ್ರಿಸುವ ಬಂಡವಾಳಶಾಹೀ ಸಂಸ್ಕೃತಿ ಇನ್ನೊಂದೆಡೆ ಈ ಎರಡರ ವಿರುದ್ಧವೂ ಹೋರಾಡಿ ಪರ್ಯಾಯ ಸಂಸ್ಕೃತಿಯನ್ನು ರೂಪಿಸಿದಾಗ ಮಾತ್ರ ಸಾಮಾಜಿಕ ಪಿಡುಗುಗಳಿಂದ ನಾವು ಮುಕ್ತರಾಗಬಲ್ಲೆವು.

ನಮ್ಮ ಮುಂದಿನ ದಾರಿ

ಈ ಸಾಮಾಜಿಕ ಪಿಡುಗುಗಳ ವಿರುದ್ಧ ಮಹಿಳೆಯರು ಸಂಘಟನೆಯಾಗಬೇಕು. ತಮ್ಮ ಹಕ್ಕುಗಳನ್ನು ಸ್ಥಾನಮಾನಗಳನ್ನು ಪಡೆದುಕೊಳ್ಳಲು ಹೋರಾಡಬೇಕು. ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಇಲ್ಲಿಸಂಘಟನೆಯ ಅಗತ್ಯವೇಕೆಂದರೆ, ವ್ಯಕ್ತಿಗತವಾಗಿ ನಾವೆಷ್ಟೆ ಈ ಪಿಡುಗುಗಳ ವಿರುದ್ಧ ಹೋರಾಡಿದರೂ, ಇಡೀ ಸಮಾಜದ ಪ್ರಜ್ಞೆಯನ್ನು ನಮ್ಮೊಡನೆ ಮೇಲೆತ್ತಲಾಗದೆ ಹೋದರೆ, ಸಂಘಟಿತವಾಗಿ ಬದಲಾಯಿಸದೆ ಹೋದರೆ, ನಾವು ಪಡುವ ಶ್ರಮವೆಲ್ಲಾ ವ್ಯರ್ಥ. ನಮ್ಮ ಸ್ಥಾನಮಾನ, ಸ್ಥಿತಿಗತಿಗಳಲ್ಲಿ ಬದಲಾವಣೆ ಬಯಸುವ ನಾವು ಇಡೀ ಸಮಾಜದ ಸಮಸ್ಯೆಗಳಾದ ಅನಕ್ಷರತೆ, ನಿರುದ್ಯೋಗ ಬೆಲೆಏರಿಕೆ, ಬಡತನ, ಹಸಿವೆ, ನೈತಿಕ ಮೌಲ್ಯಗಳ ಅಧಃಪತನಗಳ ಬಗ್ಗೆ ಸಮಾಜದ ಜನಸಮುದಾಯದೊಂದಿಗೆ ಹೋರಾಟ ನಡೆಸುವಂತಹ ನಿಕಟ ಸಂಪರ್ಕ ಹೊಂದಿರಬೇಕು. ಆಗ ಮಾತ್ರ ಇಡೀಸಮಾಜದ ಬದಲಾವಣೆಯೊಂದಿಗೆ ನಮ್ಮ ಸಮಸ್ಯೆಗಳನ್ನೂ ಬೇರುಸಹಿತ ಕಿತ್ತು ಹಾಕಬಹುದೆಂಬ ದೂರದೃಷ್ಟಿ ನಮಗಿರಬೇಕು.

ಇಡೀ ಪ್ರಪಂಚದಲ್ಲಿರುವ ಅರ್ಧಕ್ಕಿಂತ ಹೆಚ್ಚು ಅನಕ್ಷರಸ್ಥರು ಭಾರತದವರೊಂದರಲ್ಲೇ ಇದ್ದಾರೆಂಬುದನ್ನು ನಾವೆಂದೂ ಮರೆಯಬಾರದು. ಅದರಲ್ಲೂ ನಮ್ಮ ದೇಶದ ಹೆಂಗಸರಲ್ಲಿ 100ಕ್ಕೆ 18 ಜನ ಮಾತ್ರ ಅಕ್ಷರಸ್ಥರು. ಇಂತಹ ಪರಿಸ್ಥಿತಿಯಲ್ಲಿ ಅವರು ಯಾವ ಜ್ಞಾನಕ್ಕಾದರೂ ಸಮೀಪವಾಗಲು ಸಾಧ್ಯವುಂಟೇ? ಅದಕ್ಕಾಗಿ ವಿದ್ಯಾಭ್ಯಾಸವನ್ನು ಎಲ್ಲರಿಗೂ ಸಿಗುವಂತೆ ಮೂಲಭೂತ ಹಕ್ಕಾಗಿಸಬೇಕು.

ಮಹಿಳೆಯರು ಬೌದ್ಧಿಕವಾಗಿ, ಮಾನಸಿಕವಾಗಿ ಅವಲಂಬಿಗಳಾಗುವುದಕ್ಕೆ ಕಾರಣ ಅವರು ಆರ್ಥಿಕವಾಗಿ ಅವಲಂಬಿಗಳಾಗಿರುವುದು. ಆದ್ದರಿಂದ ಪ್ರತಿಯೊಬ್ಬ ಮಹಿಳೆಯೂ ಉತ್ಪಾದನಾ ಕ್ಷೇತ್ರದಲ್ಲಿ ಪಾಲ್ಗೊಳ್ಳುವಂತೆ ಆಗಲು ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಬೇಕು.

ಉದ್ಯೋಗಸ್ಥ ಮಹಿಳೆಯರಿಗೆ ಸರಿಯಾದ ವಾತಾವರಣವನ್ನು ಕಲ್ಪಿಸಲು ಕನಿಷ್ಠ ವೇತನ, ಸಮಾನವೇತನ, ದಿನಕ್ಕೆ ಎಂಟು ಗಂಟೆಮಾತ್ರ ಕೆಲಸ, ಹೆರಿಗೆ ಭತ್ಯೆ, ಹೆರಿಗೆ ರಜ, ಕೆಲಸ ಮಾಡುವ ತಾಯಂದಿರಿಗೆ ಮಕ್ಕಳಿಗೆ ದಾದ ವ್ಯವಸ್ಥೆ ಇವೆಲ್ಲವೂ ಕಲ್ಪಿಸಿಕೊಡಬೇಕು ಇವೆಲ್ಲವೂ ಅನಿವಾರ್ಯ ಅಗತ್ಯಗಳಾದರೂ ಯಾವುವೂ ಬಹಳಷ್ಟು ಮಹಿಳೆಯರಿಗೆ ಸಿಗುತ್ತಿಲ್ಲ. ಆದ್ದರಿಂದ ಹೋರಾಟ ಅನಿವಾರ್ಯವಾಗಿದೆ.

ನಗರಗಳಲ್ಲಿ, ಹಳ್ಳಿಗಳಲ್ಲಿ ದುಡಿಯುವ ಮಹಿಳೆಯರು ಎಲ್ಲಾ ಪಿಡುಗುಗಳಿಗೆ ಅತ್ಯಾಚಾರಕ್ಕೆ ಮಾನಭಂಗಗಳಿಗೆ ತುತ್ತಾಗುತ್ತಿರುವುದು ಸರ್ವೇಸಾಮಾನ್ಯ ಸಂಗತಿಯಾಗಿದೆ. ಇವೆಲ್ಲವುಗಳನ್ನು ಪ್ರೋತ್ಸಾಹಿಸುವಂತಹ ನಾಟಕಗಳು, ವ್ಯಾಪಾರಿ ಸಿನೆಮಾಗಳು, ಜಾಹೀರಾತುಗಳು, ಪುಸ್ತಕಗಳು, ಇವೆಲ್ಲದರ ವಿರುದ್ಧ ಸಂಘಟಿತ ಹೋರಾಟ ಬೇಕಿದೆ.

ಹೋರಾಡುವಾಗ ಗಮನಿಸಬೇಕಾದ ಇನ್ನೊಂದು ಅಂಶ 'ಹೋರಾಟ ಎಂದಿಗೂ ಪುರುಷ ವಿರೋಧೀ ಹೋರಾಟ' ಆಗಬಾರದು. ಸಮಾಜದಲ್ಲಿಯ ಅನ್ಯಾಯ ಅಸಮಾನತೆಯನ್ನು ಕಿತ್ತೊಗೆದು ಹೊಸ ವ್ಯವಸ್ಥೆಯನ್ನು ತರಲು ಶ್ರಮಿಸುತ್ತಿರುವ ಎಲ್ಲಾ ದುಡಿಯುವ ಜನರ ಹೋರಾಟದ ಅಂಗವಾಗಿ, ಈ ಪಿಡುಗುಗಳ ವಿರುದ್ಧದ ಸ್ತ್ರೀ ವಿಮೋಚನಾ ಚಳುವಳಿ ಬೆಳೆಯಬೇಕು. ಆಗಲೇ ಅದು ಸಾಮಾಜಿಕವಾಗಿ ಅರ್ಥಪೂರ್ಣಹಾಗೂ

ಮೂದಲಿಕೆ ಬಿಡಿ – ಬರಗಾಲದತ್ತ ಗಮನಹರಿಸಿ

ಬೋಫೋರ್ಸ್, ಸ್ವಿಸ್‌ಬ್ಯಾಂಕ್ ಮೊದಲಾದ ಭ್ರಷ್ಟಾಚಾರದ ಪ್ರಸಂಗಗಳಲ್ಲಿ ರಾಜೀವ್‌ಗಾಂಧಿ ಸರಕಾರ ಸಿಕ್ಕಿಕೊಂಡ ನಂತರ ಕರ್ನಾಟಕದ ಕೆಲವು ಕಾಂಗ್ರೆ ಮುಖಂಡರಿಗೆ ರಾತ್ರಿ ನಿದ್ರೆಯ ಶಾಪ ಹತ್ತಿದಂತಿದೆ. ರಾಜ್ಯದ ಜನರ ಗಮನವನ್ನು ದಿಲ್ಲಿ ರಾಜಕೀಯದಿಂದ ರಾಜ್ಯದ ಜನತಾ ಸರ್ಕಾರದತ್ತ ಸೆಳೆಯುವ ಶತ ಪ್ರಯತ್ನ ನಡೆದಿದೆ. ವಿಧಾನ ಪರಿಷತ್ತಿನಲ್ಲಿ ಪ್ರತಿಪಕ್ಷದ ನಾಯಕರಾದ ನರಸಿಂಹಮೂರ್ತಿಯವರು ಬಿಡುವಿಲ್ಲದೇ ನಾನಾ ತರದ ಆರೋಪಗಳ ಸುರಿಮಳೆಯನ್ನೇ ಕರೆಯುತ್ತಿದ್ದಾರೆ.ಆಸ್ಕರ್ ಫೆರ್ನಾಂಡೀಸ್ ಬಂಗಾರಪ್ಪನವರೆಲ್ಲಾ ನರಸಿಂಹಮೂರ್ತಿಯವರ ರಕ್ಷಣೆಗೆ ಧಾವಿಸಬೇಕಾಯಿತು, ಹೆಗಡೆಯವರ ಬಹಿರಂಗ ಸವಾಲಿನ ನಂತರ. ರಾಮಕೃಷ್ಣ ಹೆಗಡೆಯವರು ಭ್ರಷ್ಟಾಚಾರದ ಅವತಾರವೆಂಬ ನರಸಿಂಹ ಮೂರ್ತಿಯವರ ಆರೋಪವನ್ನು ಸ್ವೀಕಾರ ಮಾಡಿದ ಹೆಗಡೆಯವರು "ನಿಖರವಾದ ಆರೋಪಗನ್ನು ಹೇಳಿ ಇಲ್ಲವಾದರೆ ಕಾನೂನು ಕ್ರಮಕ್ಕೆ ಗುರಿಯಾಗಬೇಕಾದೀತು" ಎಂದು ಹೇಳಿದ ನಂತರ ಆರೋಪ ಪ್ರತ್ಯಾರೋಪಗಳು ಹೆಚ್ಚಾಗಿ ಪತ್ರಿಕೆಗಳಲ್ಲಿ ಓದಲು ಲಭ್ಯವಾಗುತ್ತಿದೆ ರಾಜ್ಯದ ಹೆಚ್ಚಿನ ಪ್ರದೇಶ ಈಗಲೂ ಬರಗಾಲದ ಬವಣೆಯನ್ನೆದುರಿಸಬೇಕಾಗಿರುವಾಗ, ಬೆಲೆ ಬಾಳುವ ಬೀಜ ಕೊಂಡು ಕೊಂಡು, ಬಿತ್ತಿ ಈಗದು ಒಣಗಿ ಹೋಗಿ ರೈತ ಸಮುದಾಯ ಅಪಾರ ಹಾನಿಗೆ ತುತ್ತಾಗುವಾಗ ಆರೋಪ ಪ್ರತ್ಯಾರೋಪಗಳಲ್ಲೇ ಕಾಲ ಕಳೆಯುವ ಕಾಂಗ್ರೆ ಚಾಳಿ ನಿಜಕ್ಕೂ ನಾಚಿಕೆಗೇಡು.

ಜನರ ಸಮಸ್ಯೆಗಳಿಗೆ ಕಾಯಂ ಪರಿಹಾರ ಕಂಡು ಹಿಡಿಯುವಲ್ಲಿ, ಒದಗಿಸುವಲ್ಲಿ, ಕಾಂಗ್ರೆ ಮತ್ತು ಜನತಾ ಸರಕಾರಗಳೆರಡೂ ವಿಫಲ ಗೊಂಡಿವೆ. ಮಹಾರಾಷ್ಟ್ರದ ದಾರುಣ ಕತೆಯನ್ನೋದಿ:

"ಕುಡಿಯುವ ನೀರಿನ ಸಲುವಾಗಿ ಸತಾರಾ ಜಿಲ್ಲೆಯ ವತ್ಥರ್ ಗ್ರಾಮ ಪಡಿತರ ಪದ್ಧತಿಯನ್ನು ಆಚರಣೆಯಲ್ಲಿ ತಂದಿದೆ. 'ದಾಂಥಲೆ' (ಗೂಡಾಗರ್ದಿ) ಯನ್ನು ನಿಲ್ಲಿಸಿ ಪ್ರತಿಯೊಬ್ಬನಿಗೆ ಪ್ರತಿ

ಕರ್ನಾಟಕ ರಾಜ್ಯದಲ್ಲಿ

ದಿವಸ 30 ಲೀಟರ್ ನೀರು ಲಭಿಸುವಂತೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ. ಮುಂಬರುವ ದಿವಸಗಳಲ್ಲಿ ಈ ಕೋಟಾವನ್ನು 8–10 ಲೀಟರಿಗೆ ಇಳಿಸಬೇಕಾದೀತು. ಜಿಲ್ಲೆಯ 800 ಗ್ರಾಮಗಳಲ್ಲಿ ಇಂಥ ನೀರಿನ ಪಡಿತರ ಪದ್ಧತಿ ಜಾರಿ ಮಾಡಬೇಕಾಗಿದೆ. ಸದ್ಯ 44 ಹಳ್ಳಿಗಳಿಗೆ 18 ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ.

ಕೊಯಿನಾ ಜಲಾಶಯದ ಕ್ಷೇತ್ರದಲ್ಲಿ ಮಳೆಯಾಗದಿರುವುದೇ ಅದಕ್ಕೆ ಕಾರಣವಂತೆ. ಆದರಿಂದಾಗಿ ಕಬ್ಬು ಅರೆಯುವ ಕೆಲಸ ನೌಕರಿ ಕೊಡಿಸುವ ಕೆಲಸಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದಂತೆ.

ಕರ್ನಾಟಕ ರಾಜ್ಯದಲ್ಲಿ ಸರಕಾರದ ಹೇಳಿಕೆಪ್ರಕಾರ 133 ತಾಲೂಕುಗಳ ಪೈಕಿ 15 ತಾಲೂಕುಗಳಲ್ಲಿ ಮಳೆಯೇ ಬಿದ್ದಿಲ್ಲವಂತೆ. 63 ತಾಲೂಕುಗಳಲ್ಲಿ ಕಡಿಮೆ ಮಳೆಯಾಗಿದೆ. ಕೆಲವು ಕಡೆ ಮಾಮೂಲಿ ಮಳೆಯಾಗಿದೆಯಂತೆ, ಶಿವಮೊಗ್ಗ ಮೊದಲಾದ ಮಲೆನಾಡು ಪ್ರದೇಶಗಳಲ್ಲೂ ಕೋಲಾರ ಮೊದಲಾದ ಬಯಲು ಪ್ರದೇಶಗಳಲ್ಲೂ ಮಳೆ ಅಭಾವ ಹೆಚ್ಚಾಗಿದೆ. ರಾಜ್ಯಾದ್ಯಂತ ನೋಡಿದರೆ ಮುಕ್ಕಾಲು ಭಾಗದಷ್ಟು ಪ್ರದೇಶಗಳಲ್ಲಿ ರೈತರಿಗೆಲ್ಲಅಪಾರ ಹಾನಿಯಾಗಿದೆ. ತೆಂಗು ಕಂಗಿಗೂ ಹಾನಿಯಾಗಿದೆ.

ಬರಪರಿಹಾರಕ್ಕೆ ಕೇಂದ್ರವಂತಿಗೆ ನೀಡುತ್ತಿದೆಂದು ಕಾಂಗ್ರೆ ಮುಖಂಡರು ಪ್ರಚಾರ ಮಾಡುತ್ತಿದ್ದಾರೆ. ಆದರೆ ಅದರಲ್ಲಿ ಹೆಚ್ಚಿನಂಶ ಯೋಜನೆಯ ಮುಂಗಡ ಹಣವಾಗಿರುತ್ತದೆಂಬ ಆರೋಪವನ್ನು ಹೋದ ವರ್ಷ ಜ್ಯೋತಿಬಸು ಮಾಡಿದ್ದರು. ಈ ವರ್ಷ ಬೊಮ್ಮಾಯಿ ಅವರು ಕೂಡ ಅದೇ ಮಾತನ್ನು ಉಚ್ಚರಿಸಿದ್ದಾರೆ.

ಆಸ್ಕರ್‌ಫೆರ್ನಾಂಡೀಸಾಗಲೀ ನರಸಿಂಹಮೂರ್ತಿಯವರಾಗಲೀ ರಾಜ್ಯಕ್ಕೆ ಹೆಚ್ಚು ಧನಸಹಾಯ ನೀಡಲು ಕೇಂದ್ರ ಸರಕಾರದ ಮೇಲೆ ಒತ್ತಾಯ ತರುತ್ತಿಲ್ಲ ನಾಲ್ಕುವರ್ಷಗಳ ಅನುಭವ ಕಣ್ಣ ಮುಂದಿದೆ. ಕೇಂದ್ರ–ರಾಜ್ಯಗಳ ಸಂಬಂಧದ ಕುರಿತು ಸರ್ಕಾರಿಯಾ ಕಮಿಶನಿನ ವರದಿ ಪೂರ್ಣಗೊಂಡಿಲ್ಲ. ಅಲ್ಲಿಯತನಕ ಕೇಂದ್ರ – ರಾಜ್ಯ ಸಂಬಂಧ ಸುಧಾರಿಸಲು ಸಾಧ್ಯವಿಲ್ಲ ನಮ್ಮ ರಾಜ್ಯದ ಕಾಂಗ್ರೆ ಮುಖಂಡರು ಕೇಂದ್ರದಿಂದ ಹೆಚ್ಚು ಸಂಪನ್ಮೂಲ ಪಡೆಯುವುದರತ್ತ ಗಮನಹರಿಸಿದಲ್ಲಿ ರಾಜ್ಯದ ಜನರ ಹಿತ ಸಾಧಿಸಿದಂತಾಗುತ್ತದಲ್ಲ.

– ಎನ್ಕೆ

ಯುನೈಟೆಡ್ ಬ್ರುವರಿಸ್ ಹೋರಾಟ

ಯುನೈಟೆಡ್ ಬ್ರುವರಿಸ್ ಮೇನೇಜ್‌ಮೆಂಟ್ ಜುಲೈ 13ರಿಂದ ಅಕ್ರಮ ಬೀಗಮುದ್ರೆ ಘೋಷಿಸಿದೆ. ಸಿ.ಐ.ಟಿ.ಯು. ನೇತೃತ್ವದ ಸಂಘದ ಜಂಟಿ ಕಾರ್ಯದರ್ಶಿ ಮತ್ತು ಖಜಾಂಚಿ ಸೇರಿದಂತೆ ಹನ್ನೊಂದು ಕಾರ್ಮಿಕರನ್ನು ಕೆಲಸದಿಂದ ವಜಾಮಾಡಿದೆ, ಸಂಘದ ಉಪಾಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿ ಸೇರಿದಂತೆ 14 ಮಂದಿ ಕಾರ್ಮಿಕರನ್ನು ಅಮಾನತ್ತಿನಲ್ಲಿಟ್ಟಿದೆ. ಯು.ಬಿ ಆಡಳಿತ ಮಂಡಳಿ ರಾತ್ರೋ ರಾತ್ರಿ ಕಾರ್ಮಿಕ ಸಂಘದ ಕಟ್ಟಡವನ್ನು ಧ್ವಂಸಮಾಡಿ ಸಂಘದ ಸ್ವತ್ತಾದ ಪೀಠೋಪ ಕರಣಗಳು ಮತ್ತು ದಸ್ತಾವೇಜುಗಳನ್ನು ಅಪಹರಿಸಲಾಗಿದೆ. ಟೂಲ್ ಡೌನ್ ಮುಷ್ಕರ ಮಾಡಿದರೆಂಬ ಕಾರಣಕ್ಕಾಗಿ ಜುಲೈ ತಿಂಗಳ ಸಂಬಳ ತಡೆಹಿಡಿಯಲಾಗಿದೆ. ಆಡಳಿತ ವರ್ಗ ಕಾರ್ಮಿಕರಿಂದ ದಿನದಿಂದ ದಿನಕ್ಕೆ ಉತ್ಪಾದನೆಯಲ್ಲಿ ಹೆಚ್ಚಳ ಅಧಿಕ ದುಡಿಮೆಯ ಹೊರೆಯನ್ನು ಹಾಕುತ್ತಾ ಬಂದಿದೆ. 1985ರಲ್ಲಿ ವೇತನ ಹಾಗೂ ಇನ್ನಿತರ ಸೌಲಭ್ಯಗಳಿಗಾಗಿ ಮುಂದಿಟ್ಟ ಬೇಡಿಕೆ ಇನ್ನೂ ಕೋರ್ಟ್‌ನಲ್ಲಿದೆ. 1985ರ ಲಾಕೌಟ್ ಸಂದರ್ಭ 9 ತಿಂಗಳ ಸಂಬಳ ಇದುವರೆವಿಗೂ ಸಹ ಪಾವತಿ ಮಾಡಿರುವುದಿಲ್ಲವೆಂದು ಸಂಘದ ಅಧ್ಯಕ್ಷರಾದ ಕಾ|| ಕೆ. ಎಸ್. ಸುಬ್ರಮಣ್ಯಂ ಆರೋಪಿಸಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ ಇದೇ ರೀತಿಯಲ್ಲಿ ಹಲವಾರು ಯುನಿಟ್‌ಗಳಲ್ಲಿ ಲಾಕೌಟ್–ವಜಾ ವಿರುದ್ಧ ಹೋರಾಟಗಳು ರೂಪುಗೊಂಡಿದ್ದು ಅಖಿಲ ಭಾರತ ಯು.ಬಿ. ಎಂಪ್ಲಾಯಿಸ್ ಫೆಡರೇಷನ್ ಈ ಚಳುವಳಿಯ ನಾಯಕತ್ವ ವಹಿಸಿದೆ ಎಂದು ಅವರು ತಿಳಿಸಿದ್ದಾರೆ. ಇಷ್ಟೆಲ್ಲಾ ದಾಳಿ ದಬ್ಬಾಳಿಕೆಯನ್ನು ಎದುರಿಸಿ ಹೋರಾಡುತ್ತಿರುವ ಯು.ಬಿ.ಕಾರ್ಮಿಕರ ಧೀರ ಹೋರಾಟವನ್ನು ಜುಲೈ 28 ರಿಂದ 30ರವರೆವಿಗೆ ಮೈಸೂರಿನಲ್ಲಿ ಸೇರಿದ್ದ ಸಿ.ಐ.ಟಿ.ಯು. ರಾಜ್ಯ ಸಮಿತಿ ಸಭೆ ಬೆಂಬಲಿಸಿದೆ. ಸಿ.ಐ.ಟಿ.ಯು.ಗೆ ಸೇರಿದ್ದ ಎಲ್ಲಾ ಕಾರ್ಮಿಕ ಸಂಘಗಳು ಹೋರಾಟ ಬೆಂಬಲಿಸಿ ಕಾರ್ಮಿಕ ಮಂತ್ರಿ, ಸರಕಾರ, ಅಧಿಕಾರಿಗಳಿಗೆ ಹಾಗೂ ಮೇನೇಜ್‌ಮೆಂಟ್‌ಗೆ ಪತ್ರ ಬರೆದು ಯು.ಬಿ. ಕಾರ್ಮಿಕ ಸಂಘದ ಜೊತೆ ಮಾತುಕತೆ ಮಾಡಿ ಅವರ ನ್ಯಾಯ ಯುತ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸುವಂತೆ ರಾಜ್ಯ ಪ್ರಧಾನ ಕಾರ್ಯದರ್ಶಿಯವರಾದ ಕಾ|| ಸಿ. ನಂಜುಂಡಪ್ಪನವರು ಕರೆನೀಡಿದ್ದಾರೆ.

ಇತ್ತೀಚೆಗೆ ಕಾರ್ಮಿಕ ಮಂತ್ರಿಯವರ ಮಧ್ಯ ಪ್ರವೇಶದಿಂದ ಆಡಳಿತ ವರ್ಗ ಬೀಗ ಮುದ್ರೆ ತೆರವು ಮಾಡಲಾಗಿದೆ. ಇಂದಿನಿಂದ ಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದು ವಿವಾದ ಹಾಗೆಯೇ ಉಳಿದಿದ್ದು ಆಡಳಿತ ವರ್ಗ ಮುಖಂಡರೊಡನೆ ಮಾತು ಕತೆ ನಡೆಸಿ ವಿವಾದ ಬಗೆ ಹರಿಸದಿದ್ದರೆ ಹೋರಾಟ ಮುಂದುವರೆಸುವುದು ಅನಿವಾರ್ಯವೆಂದು ಸಂಘ ಎಚ್ಚರಿಸಿದೆ.

○

ಉಳ್ಳಾಲ ಎಸ್. ಐ. ದಬ್ಬಾಳಿಕೆ ಖಂಡನೆ

ಸಿ.ಪಿ.ಐ.(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರೂ ರೈತಸಂಘದ ಮುಖಂಡರಾದ ಕಾ|| ಜನಾರ್ಧನನಾಯಕ್‌ರವರು ಪಜೀರು ಗ್ರಾಮದ ಭೂಮಾಲೀಕ ಗ್ರಾಮದ ಬಡ ರೈತರಿಗೆ ನೀಡುತ್ತಿದ್ದ ಕಿರುಕುಳದ ವಿರುದ್ಧ ದೂರು ನೀಡಲು ಉಳ್ಳಾಲ ಪೋಲೀಸ್‌ಠಾಣೆಗೆ ಹೋದಾಗ ಸಬ್ ಇನ್ಸ್‌ಪೆಕ್ಟರ್ ಅವಾಚ್ಯ ಶಬ್ದಗಳಿಂದ ಬೈದು ಕೇಸು ದಾಖಲು ಮಾಡಿರುವ ದುರ್ವರ್ತನೆಯನ್ನು ಸಿ.ಐ.ಟಿ.ಯು. ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ||ಕೆ.ಮೂಸಬ್ಬ ತೀವ್ರವಾಗಿ ಖಂಡಿಸಿದ್ದಾರೆ. ಘಟನೆ ಬಗ್ಗೆ ತನಿಖೆ ನಡೆಸಿ ಎಸ್.ಐ. ಮೇಲೆ ಕ್ರಮ ಜರುಗಿಸುವಂತೆ ಒತ್ತಾಯಿಸಿರುವ ರೈತ ಕಾರ್ಮಿಕರು ಎಸ್.ಐ. ವಿರುದ್ಧ ಚಳುವಳಿ ನಡೆಸಲು ಕರೆ ನೀಡಿದ್ದಾರೆ.ಎಸ್.ಎಫ್.ಐ. ನ ಜಿಲ್ಲಾಕಾಯದರ್ಶಿ ಕಾ||ಸುನಿಲ್ ನಟೇಕರ್ ಘಟನೆ ಖಂಡಿಸಿ ಎಸ್.ಐ. ರವರನ್ನು ಅಮಾನತುಗೊಳಿಸುವಂತೆ ಒತ್ತಾಯಿಸಿದ್ದಾರೆ.

○

ನಿವೇಶನ ಖಾಯಂಗಾಗಿ ಒತ್ತಾಯ

ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಲಗ್ಗೆರೆ ಗ್ರಾಮಕ್ಕೆ ಸೇರಿದ ರಾಜಗೋಪಾಲ ನಗರ ನಿವಾಸಿಗಳು ಕಳೆದ 11 ವರ್ಷಗಳಿಂದ ಗುಡಿಸಲು ಕಟ್ಟಿಕೊಂಡು ವಾಸ ಮಾಡುತ್ತಾ ಬಂದಿದ್ದಾರೆ. ದಿನಗೂಲಿ ಮನೆಕೆಲಸ, ಕೈಗಾಡಿಯಲ್ಲಿ ಸಣ್ಣಪುಟ್ಟ ವ್ಯಾಪಾರ ಮಾಡಿ ಜೀವನ ನಡೆಸುವ ಈ ಗುಡಿಸಲು ನಿವಾಸಿಗಳಿಗೆ ಇದ್ದಕ್ಕಿದಂತೆ ತಾಲ್ಲೂಕು ಕಛೇರಿಯಿಂದ ಆಗಸ್ಟ 3ರಂದು ಒಂದು ನೋಟೀಸ್ ಕೈಗೆ ಬಂತು. ನಿಮ್ಮನ್ನು ಬಲವಂತವಾಗಿ ನಿಮ್ಮ ಮನೆಗಳಿಂದ ಹೊರ ದೂಡಲಾಗುವುದೆಂದು ಆ ನೋಟೀಸ್ ತಿಳಿಸಿತು. ಬಡಾವಣೆಯ ಜನತೆ ಈ ಹಿಂದೆ ನಡೆಸಿದ ಹಲವಾರು ಹೋರಾಟಗಳಲ್ಲಿ ತಮ್ಮನ್ನು ಖಾಯಂ ಗೊಳಿಸಲು ಒತ್ತಾಯಿಸಿದ ಸಂದರ್ಭಗಳಲ್ಲಿ ಖಾಯಂ ಗೊಳಿಸುವ ಭರವಸೆ ನೀಡುತ್ತಾ ಬಂದ ಅಧಿಕಾರಿಗಳು ದಿಢೀರನೆ ನೀಡಿದ ನೋಟೀಸ್‌ನಿಂದದಿಗ್ಭ್ರಮೆಗೊಂಡರು. ಆಗಸ್ಟ 13ರಂದು ಬಡಾವಣೆಯ ಸಣ್ಣ ಪುಟ್ಟ ಮಕ್ಕಳಾದಿಯಾಗಿ ಸಮಸ್ತ ಜನರೆಲ್ಲಾ ಕ್ಷೇಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ಪ್ರತಿಭಟನಾ ಮೆರವಣಿಗೆ ಹೊರಟು ಬೆಂಗಳೂರು ಉತ್ತರ ತಾಲ್ಲೋಕು ತಹಸೀಲ್ದಾರರ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ತಮ್ಮ ಗುಡಿಸಲು ಸ್ಥಳ ಖಾಯಂ ಮಾಡಿ ಹಕ್ಕು ಪತ್ರನೀಡಲು ಒತ್ತಾಯಿಸುವ ಮನವಿ ಪತ್ರವನ್ನು ಅರ್ಪಿಸಿದರು. ಮೆರವಣಿಗೆಯ ನೇತೃತ್ವನ್ನು ಕಾರ್ಮಿಕ ಮುಖಂಡರು ಹಾಗೂ ಸಂಘದ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿಗಳಾದ ಕಾ|| ಎ.ವಿ. ರಮೇಶ್ ಹಾಗೂ ಎನ್.ವಿ. ಸುಬ್ಬಯ್ಯನವರು ವಹಿಸಿದ್ದರು.

○

ಪಕ್ಷದಿಂದ ಸಸ್ಪೆಂಡ್

ಹಿಂದೆ ಪಕ್ಷದ ಧಾರವಾಡ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದ ಕಾಂ. ಉಮೇಶ್ ನಾಯಕ್‌ರವರನ್ನು ಮುಷ್ಕರ ಮಾಡುವುದಿಲ್ಲವೆಂಬ ಆಶ್ವಾಸನೆನೀಡಿ ಮಾಡಲಾದ ಒಪ್ಪಂದ ಮತ್ತಿತರ ಅಶಿಸ್ತಿನ ಕ್ರಮಗಳಿಗಾಗಿ ಧಾರವಾಡ ಜಿಲ್ಲಾ ಸಮಿತಿ ಆರು ತಿಂಗಳಕಾಲ ಪಕ್ಷದಿಂದ ಅಮಾನತು ಗೊಳಿಸಿದೆ.

ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಒಗ್ಗಟಿಗೆ ಜಯ

ಕೇಂದ್ರ ಕಾರ್ಮಿಕ ಸಂಘಗಳೊಂದಿಗೆ ಜುಲೈ 14ರ ಮಾತುಕತೆಯಲ್ಲಿ ಕೇಂದ್ರ ಸರ್ಕಾರ ತಾತ್ಕಾಲಿಕ ಪರಿಹಾರದ ಬಗ್ಗೆ ಮೂರು ಅಂಶಗಳನ್ನು ಪರಿಶೀಲಿಸಲು ಒಪ್ಪಿಕೊಂಡ ಮೇಲೆ, ಎರಡು ವಾರಗಳಲ್ಲಿ ತಾತ್ಕಾಲಿಕ ಪರಿಹಾರದ ಪ್ರಶ್ನೆಯನ್ನು ಇತ್ಯರ್ಥ ಮಾಡುವುದಾಗಿ ಕೇಂದ್ರ ಕಾರ್ಮಿಕ ಮಂತ್ರಿಯವರ ಆಶ್ವಾಸನೆ ಮೇರೆಗೆ ದೇಶಾದ್ಯಂತ ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕರು ತಮ್ಮ ಜುಲೈ 21ರ ದೇಶವ್ಯಾಪೀ ಮುಷ್ಕರವನ್ನು ಮುಂದೂಡಿದ್ದರು. ಆದರೆ ಜುಲೈ 30 ರಂದು ಸಭೆ ಕರೆಯುವುದಾಗಿ ಸಂಗ್ಮಾರವರು ಮಾತು ಕೊಟ್ಟಿದ್ದರೂ ಅದನ್ನು ಒಮ್ಮೆ ಆಗಸ್ಟ 1 ಕ್ಕೆ ಮುಂದೂಡಿ, ನಂತರ ಯಾವುದೇ ಕಾರಣ ವಿಲ್ಲದೆ ಮತ್ತೆ ಮುಂದೂಡಲಾಯಿತು.

ಈ ನಡುವೆ ಬಿ.ಪಿ.ಇ. ಕಾರ್ಮಿಕ ಸಂಘಗಳು ಮತ್ತು ಸಂಗ್ಮಾರವರ ನಡುವಿನ ಒಪ್ಪಂದದ ಅಂಶಗಳನ್ನು ವಿರೋಧಿಸಿ, ತಾತ್ಕಾಲಿಕ ಪರಿಹಾರವನ್ನು ಜನವರಿ 1986ರ ಮೊದಲು ಹೊಸ ವೇತನ ಒಪ್ಪಂದ ಆರಂಭವಾಗುವ ದಿನದಿಂದಷ್ಟೇ ಕೊಡಬೇಕೆಂದು ಅಡ್ಡಿಯುಂಟು ಮಾಡಲು ಪ್ರಯತ್ನಿಸಿತು. ಮಾತ್ರವಲ್ಲ, ಅಧಿಕಾರಿಗಳಿಗೆ ಈಗಾಗಲೇ ಕೊಟ್ಟಿರುವ ತಾತ್ಕಾಲಿಕ ಪರಿಹಾರವನ್ನು ಮುಂದಿನ ವೇತನಗಳಲ್ಲಿ ಮುರಿದುಕೊಳ್ಳಬೇಕೆಂದೂ ಒತ್ತಾಯಿಸಿತಂತೆ.

ಇದನ್ನು ವಿರೋಧಿಸಿ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ ಸಂಗ್ಮಾರವರಿಗೆ ಪತ್ರ ಬರೆದು ಆಗಸ್ಟ 18 ರೊಳಗೆ ಸಂಘಗಳ ಸಭೆಕರೆದು ಸಮಸ್ಯೆ ಪರಿಹರಿಸದಿದ್ದರೆ, ನ್ಯಾಯ ಪಡೆಯಲು ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಬೇಕಾದೀತು ಎಂದು ಎಚ್ಚರಿಸಿತು. ಕಾರ್ಮಿಕರ ಐಕ್ಯತೆಯನ್ನು ಕಂಡಸರ್ಕಾರ ಕೊನೆಗೆ ನಿರ್ವಾಹವಿಲ್ಲದೆ ಜುಲೈ 14ರ ಸಭೆಯಲ್ಲಿ ಹೇಳಿದ ತಾತ್ಕಾಲಿಕ ಪರಿಹಾರದ ಸೂತ್ರವನ್ನು ಒಪ್ಪಿಕೊಳ್ಳಲೇ ಬೇಕಾಯಿತು. ಇದು ಸಾರ್ವಜನಿಕ ಉದ್ದಿಮೆಯ ಕಾರ್ಮಿಕರ ಒಕ್ಕಟ್ಟಿಗೆ ದೊರೆತ ಒಂದು ಮಹತ್ವದ ವಿಜಯ.

ದೇಶದ ಆರ್ಥಿಕತೆಗೆ ಆಧಾರವಾದ21 ಲಕ್ಷ ಕಾರ್ಮಿಕರ ಒಗ್ಗಟ್ಟಿಗೆ ದೊರೆತ ಈ ಜಯ ಇಡೀ ಕಾರ್ಮಿಕ ರಂಗದ ಮೇಲೆ ಪರಿಣಾಮ ಬೀರಲಿದೆ.

ಕೃಷಿ ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ....

ಕಟಕ್‌ನಲ್ಲಿ ಜರುಗಿದ ಕಿಸಾನ್ ಮಂಡಳಿಯ ಸಭೆ ಕೃಷಿಕಾರ್ಮಿಕರಿಗೆ ಸಂಬಂಧ ಪಟ್ಟಬೇಡಿಕೆಯನ್ನು ರೂಪಿಸುವಾಗ ಎರಡು ತುರ್ತಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿತ್ತು. 1. ಕೃಷಿಕಾರ್ಮಿಕರ ಜೀವನ ಮತ್ತು ದುಡಿಯುವ ಪರಿಸ್ಥಿತಿಗಳಿಗೆ ಸಂಬಂಧಪಟ್ಟಂತೆ ಕೇಂದ್ರೀಯ ಕಾನೂನೊಂದರ ರಚನೆ 2.ಜೀವನ ವೆಚ್ಚ ಏರಿಕೆಗೆ ಅನುಗುಣವಾಗಿ ಪರಿಷ್ಕರಣೆ ಮತ್ತು ಕಟ್ಟುನಿಟ್ಟಾದ ಅನುಷ್ಠಾನದ ಅವಕಾಶವಿರುವ ಕನಿಷ್ಟ ಕೂಲಿ ಶಾಸನ.

ಸೆಪ್ಟಂಬರ್ ಚಳುವಳಿಯನ್ನು ಇತರೆ ರೈತ ಚಳುವಳಿಗಳಿಗಿಂತ ಭಿನ್ನವಾಗಿಸಿರುವ ಈ ಬೇಡಿಕೆಯ ಬಗ್ಗೆ **ಬಿಪ್ಲವದಾಸ್‌ಗುಪ್ತಾ** ಇಲ್ಲಿ ವಿವರಿಸಿದ್ದಾರೆ.

ಸಂಗ್ರಹಾನುವಾದ : ಕೆ. ವಿ.

ಸೆಪ್ಟೆಂಬರ್ 7ರಿಂದ ಒಂದು ವಾರ ನಡೆಯುವ ರೈತರ ಚಳುವಳಿಯ ಒಂದು ಮಹತ್ವಪೂರ್ಣ ಅಂಶವೆಂದರೆ ಅದನ್ನು ಅಖಿಲ ಭಾರತ ಕಿಸಾನ್ ಸಭಾ ಹಾಗೂ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ ಜಂಟಿಯಾಗಿ ಸಂಘಟಿಸುತ್ತಿರುವುದು. ಇತರ ರೈತ ಚಳುವಳಿಗಳಿಗಿಂತ ಇದನ್ನು ಭಿನ್ನವಾಗಿಸಿರುವ ಮುಖ್ಯ ಅಂಶವಿದು. ಇತರ ರೈತ ಸಂಘಟನೆಗಳಲ್ಲಿ ಹೆಚ್ಚಿನವು ಭೂಮಾಲಕರ ಹಿತಗಳನ್ನು ಕೂಡಾ ಪ್ರತಿನಿಧಿಸುವುದರಿಂದ್ರೈತರ ಹಿತಾಸಕ್ತಿಗಳನ್ನು ಪ್ರತ್ಯೇಕವಾಗಿ ಕಂಡು, ಅವರು ದುಡಿಸಿಕೊಳ್ಳುವ ಕೃಷಿ ಕೂಲಿಕಾರರ ಹಿತಾಸಕ್ತಿ ತಮಗೆ ವಿರುದ್ಧವಾದುದೆಂದು ಭಾವಿಸುವ ಪ್ರವೃತ್ತಿ ಕಾಣುತ್ತಿದೆ. ಉದಾಹರಣೆಗೆ, ಇತ್ತೀಚೆಗೆ ಉತ್ತರ ಗುಜರಾತ್‌ನ ರೈತ ಚಳುವಳಿಯಲ್ಲಿ ಕನಿಷ್ಟ ಕೂಲಿಯ ಶಾಸನಗಳನ್ನು ರದ್ದು ಮಾಡಬೇಕೆಂಬುದು ಒಂದು ನಿರ್ದಿಷ್ಟ ಬೇಡಿಕೆಯಾಗಿತ್ತು. ಆದರೆ ಅಖಿಲ ಭಾರತ ಕಿಸಾನ್ ಸಭಾ ಪ್ರತಿಪಾದಿಸುವರೈತರ ಒಗ್ಗಟ್ಟಿನ ಪರಿಶೀಲನೆ ರೈತಾಪಿ ವರ್ಗದ ಎಲ್ಲಾ ವಿಭಾಗಗಳು ಅಂದರೆ ಶ್ರೀಮಂತ, ಮತ್ತು ಬಡ ರೈತರನ್ನು ಮಾತ್ರವಲ್ಲ, ಕೃಷಿ ಕೂಲಿಕಾರರನ್ನು ಒಳಗೊಳ್ಳುತ್ತದೆ.

ಕೃಷಿ ಸಮೂಹದ ಈ ಎರಡು ಪ್ರಮುಖ ವಿಭಾಗಗಳ ಹಿತಾಸಕ್ತಿಗಳು ಪರಸ್ಪರ ಪೂರಕ ಹಾಗೂ ಒಟ್ಟಾಗಿ ಭೂಮಾಲೀಕರ, ಲೇವಾದೇವಿಗಾರರ, ದೊಡ್ಡ ವ್ಯಾಪಾರಸ್ಥರ, ಗುತ್ತೇದಾರಿಗಳ ಹಿತಾಸಕ್ತಿಗಳಿಗೆ ಮತ್ತು ಸರ್ಕಾರೀ ಯಂತ್ರಕ್ಕೆ ವಿರುದ್ಧವಾದುದು ಎಂದು ಎ. ಐ. ಕೆ. ಎಸ್. ಭಾವಿಸುತ್ತದೆ. ಆದ್ದರಿಂದ ತಮ್ಮ ಪಕ್ಷ ಹಾಗೂ ತಮಗಿಂತ ಹೆಚ್ಚು ಶೋಷಿತರಾದ ಕೃಷಿ ಕಾರ್ಮಿಕ ಬಂಧುಗಳ ಹಕ್ಕುಗಳನ್ನು ಗೌರವಿಸಬೇಕೆಂದು, ಪಟ್ಟ ಭದ್ರ ಹಿತಾಸಕ್ತಿಗಳುಹಾಗೂ ಸರ್ಕಾರೀ ಯಂತ್ರದ ವಿರುದ್ಧ ಅದರ ಹೋರಾಟದಲ್ಲಿ ನೆರವು ನೀಡಬೇಕೆಂದು ತನ್ನ ಸದಸ್ಯರನ್ನು ಎ.ಐ.ಕೆ.ಎಸ್. ವಿನಂತಿಸಿಕೊಳ್ಳುತ್ತಾ ಬಂದಿದೆ. ತಮ್ಮ ಹಿತಾಸಕ್ತಿಗಳು ಪರಸ್ಪರ ಪೂರಕ ಎಂಬುದನ್ನು ಅರಿತುಕೊಂಡಾಗ ರೈತರು ಹಾಗೂ ಕೃಷಿ ಕೂಲಿಕಾರರ ನಡುವೆ ಏಳಬಹುದಾದ ಯಾವುದೇ ವಿವಾದವನ್ನು ಮಿತ್ರತ್ವಪೂರ್ಣ ಮಾತುಕತೆಗಳಿಂದ ಪರಿಹರಿಸಲು ಸಾಧ್ಯ.

ಏಪ್ರಿಲ್ ತಿಂಗಳಲ್ಲಿ ಕಟಕ್‌ನಲ್ಲಿ ಜರುಗಿದ ಕಿಸಾನ್ ಮಂಡಳಿಯ ಸಭೆ ಕೃಷಿ ಕಾರ್ಮಿಕರಿಗೆ ಸಂಬಂಧ ಪಟ್ಟಂತೆ ಬೇಡಿಕೆಯನ್ನು ರೂಪಿಸುವಾಗಎರಡುಮುಖ್ಯ ತುರ್ತಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿತ್ತು. ಒಂದು, ಕೃಷಿ ಕಾರ್ಮಿಕರ ದುಡಿಯುವ ಮತ್ತು ಜೀವನ ಪರಿಸ್ಥಿತಿಗಳಿಗೆ ಸಂಬಂಧಪಟ್ಟಂತೆ ಒಂದು ಕೇಂದ್ರೀಯ ಶಾಸನ ರಚನೆ ಹಾಗೂ ಎರಡನೆಯದಾಗಿ, ಕನಿಷ್ಟ ಕೂಲಿ ಶಾಸನ ಇದರಲ್ಲಿ ಜೀವನ ವೆಚ್ಚ ಏರಿಕೆಗೆ ಅನುಗುಣವಾಗಿ ಅದನ್ನು ಕಾಲಕಾಲಕ್ಕೆ ಪರಿಷ್ಕರಿಸುವ ಮತ್ತು ಅದನ್ನು ಜಾರಿಗೊಳಿಸುವ ಸೂಕ್ತ ವ್ಯವಸ್ಥೆಯ ರಚನೆಗೆ ಅವಕಾಶ.

ಕೇಂದ್ರಿಯ ಶಾಸನದ ಅಗತ್ಯ

ಕೇಂದ್ರೀಯ ಶಾಸನವೊಂದರ ರಚನೆ ಒಂದು ಧೀರ್ಘ ಕಾಲದ ಬೇಡಿಕೆ. ಬಹಳ ಹಿಂದೇನೇ ಅದನ್ನು ನೆರವೇರಿಸುವ ಭರವಸೆ ನೀಡಲಾಗಿದ್ದರೂ ಇದುವರೆಗೂ ಏನೂ ಆಗಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಇತ್ತೀಚಿನ ಬೆಳವಣಿಗೆಯೆಂದರೆ ಜೂನ್ 14ರಂದು "ಗ್ರಾಮೀಣ ಕೂಲಿಕಾರರ ಬಗ್ಗೆ ರಾಷ್ಟ್ರೀಯ ಆಯೋಗ" ದ ರಚನೆ. ಇದಕ್ಕೆ ಗುಜರಾತ್‌ನ ಒಬ್ಬ ಕಾಂಗ್ರೆಸ್ [ಐ] ಎಂ. ಪಿ. ಅಧ್ಯಕ್ಷರು. ಇದರಲ್ಲಿ ಕೃಷಿ ಕೂಲಿಕಾರ ಸಂಘಟನೆಗಳ ಪ್ರತಿನಿಧಿಗಳಿಗೆ ಮಾತ್ರವಲ್ಲ, ರಾಷ್ಟ್ರೀಯ ಶ್ರಮಿಕ ಸಂಸ್ಥೆಗೂಪ್ರಾತಿನಿಧ್ಯ ನೀಡದಿರುವಬಗ್ಗೆ ಈಗಾಗಲೇ ಈ ಆಯೋಗ ತೀವ್ರ ಟೀಕೆಗೊಳಗಾಗಿದೆ.

ಇದುವರೆಗಿನ ಆಯೋಗಗಳ ರಚನೆಯ ಅನುಭವದಿಂದ ಹೇಳುವುದಾದರೆ ಸತತ ಒತ್ತಡವಿಲ್ಲದಿದ್ದರೆ ಸುಮ್ಮನೆ ಸಮಯ ತಳ್ಳುವ ಪ್ರಯತ್ನನಡೆಯುತ್ತದಷ್ಟೆ. ಕೇಂದ್ರ-ರಾಜ್ಯ ಕುರಿತಾದ ಸರ್ಕಾರಿಯಾ ಆಯೋಗದ ಸಂಬಂಧದಲ್ಲಿ ಇದನ್ನೇ ಕಾಣುತ್ತಿದ್ದೇವೆ. ಆದ್ದರಿಂದ ಈ ಆಯೋಗದಲ್ಲೂ ತಮ್ಮ ಬೇಡಿಕೆಯ ತುರ್ತಿನ ಭಾವನೆ ಮೂಡಿಸಬೇಕಾದರೆ ರೈತರುಮತ್ತು ಕೃಷಿಕಾರ್ಮಿಕರು ಸತತ ಚಳುವಳಿ ನಡೆಸಬೇಕಾಗುತ್ತದೆ.

ಹಲವಾರು ಸಾಮಾಜಿಕ ಅನಾನುಕೂಲತೆಗಳಿಂದ ನರಳುತ್ತಿರುವ,ಅತ್ಯಂತ ಕಡಿಮೆ ಸಂಘಟಿತವಾಗಿರುವ ಕೃಷಿ ಕೂಲಿಕಾರ ವರ್ಗಕ್ಕೆ ಸಾಕಷ್ಟು ಕಾನೂನು ಬೆಂಬಲ ಅತ್ಯಗತ್ಯ ಈಗಾಗಲೇ ಅವರಿಗೆ ಸಂಬಂಧ ಪಟ್ಟಂತೆ ಇರುವ ಕನಿಷ್ಟ ಕೂಲಿ, ಜೀತ ಮುಂತಾದವನ್ನು ಕುರಿತ ಕಾನೂನುಗಳು ಸರಿಯಾಗಿ ಜಾರಿಗೆ ಬಂದಿಲ್ಲ. ಆದ್ದರಿಂದ ಅವರ ಜೀವನದ ಎಲ್ಲಾ ಅಂಶಗಳನ್ನು ಒಳಗೊಳ್ಳುವ ಒಂದು ಸಮಗ್ರ ಶಾಸನದ ರಚನೆ ಮತ್ತು ಅದರ ಕಟ್ಟುನಿಟ್ಟಾದ ಅನುಷ್ಠಾನ ಆಗಬೇಕೆಂದು ಎ.ಐ.ಕೆ.ಎಸ್. ಒತ್ತಾಯಿಸುತ್ತಿದೆ. ಇಂತಹ ಒಂದು ಸಮಗ್ರ ಶಾಸನ ಕೃಷಿಕೂಲಿಕಾರರ ಸಂಘಟನೆಯ ಹಕ್ಕನ್ನು ಮಾಡಿ, ವಿವಾದಗಳ ಪರಿಹಾರಕ್ಕೆ ಖಾಯಂ ವ್ಯವಸ್ಥೆಯನ್ನು ರೂಪಿಸಬೇಕು.

ಹಳ್ಳಿಗಳ ಶ್ರೀಮಂತರ ವೈಷಮ್ಯ ಮತ್ತು ದೇಶದ ಹಲವುಭಾಗಗಳಲ್ಲಿ ಗ್ರಾಮೀಣ ಜೀವನದಲ್ಲಿ ಕಂಡುಬರುತ್ತಿರುವ ಹಿಂಸೆ ಮತ್ತು ಭಯೋತ್ಪಾದಕತೆಯ ಹಿನ್ನೆಲೆಯಲ್ಲಿ ಕೃಷಿ ಕೂಲಿಕಾರರ ಸಂಘಟನೆಯ ಹಕ್ಕಿಗೆ ಮಾನ್ಯತೆ ಬೇಕೆಂಬುದು ಒಂದು ಮಹತ್ವ ಪೂರ್ಣ ಬೇಡಿಕೆ. ಯಾಕೆಂದರೆ ಕೃಷಿ ಕೂಲಿಕಾರರನ್ನು ಸಂಘಟಿಸಬೇಕೆನ್ನುವವರು ಪಟ್ಟ ಭದ್ರ ಹಿತಾಸಕ್ತಿಗಳಿಂದ ಮರಣಾಂತಿಕ ಹಲ್ಲೆಗಳನ್ನು ಎದುರಿಸಬೇಕಾದ ಪರಿಸ್ಥಿತಿಯಿದೆ.

ಹರಿಜನ ಮತ್ತು ಗಿರಿಜನ ಕಲ್ಯಾಣ ಸಮಿತಿಯ ಹನ್ನೊಂದನೇ ವರದಿ [1985-86] ಪ್ರಕಾರವೇ ಹೆಚ್ಚಿನವರು ಕೃಷಿ ಕೂಲಿಕಾರರಾಗಿರುವ ಈ ಜನ ಸಮೂಹಗಳ ಮೇಲಿನ ಅತ್ಯಾಚಾರಗಳ ಮೂಲದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿರುತ್ತವೆ. ಕಾನೂನು ನಿಗದಿ ಪಡಿಸಿದ ಕನಿಷ್ಟ ಕೂಲಿಯನ್ನು ಪಡೆಯುವ ತಮ್ಮ ಹಕ್ಕನ್ನು ಕೇಳಿದಾಗ ಮತ್ತು ಹಕ್ಕು ಪತ್ರ ಪಡೆದ ಜಮೀನನ್ನು ಪಡೆಯುವಾಗ ಕೃಷಿಕೂಲಿಕಾರರು ಇತಂಹ ಅತ್ಯಾಚಾರಗಳನ್ನು ಎದುರಿಸಬೇಕಾಗುತ್ತದೆ ಎಂದಿದೆ ಆ ವರದಿ. ಈ ರೀತಿ ಹರಿಜನ ಗಿರಿಜನರಿಂದ ಜಮೀನು ಕಿತ್ತುಕೊಳ್ಳುವ ಪಟ್ಟಭದ್ರ ಹಿತಾಸಕ್ತಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದೂ ಆ ವರದಿ ಒತ್ತಾಯಿಸಿದೆ.

1985ರಲ್ಲಿ ನಡೆದ ರಾಜ್ಯ ಕಂದಾಯ ಮಂತ್ರಿಗಳ ಸಭೆಯೂ ಈ ಬಗ್ಗೆ ಸರಿಯಾದ ವ್ಯವಸ್ಥೆ ಇರಬೇಕೆಂದು ಒತ್ತಾಯಿಸಿತ್ತು.

ಆದ್ದರಿಂದ ಇಂತಹ ಅತ್ಯಾಚಾರಗಳ ವಿರುದ್ಧ ಕಠಿಣ ಕ್ರಮ ಹಾಗೂ ಶಿಕ್ಷೆ ವಿಧಿಸುವ ಮತ್ತು ಕೃಷಿ ಕೂಲಿಕಾರರಿಗೆ ಪ್ರತೀಕಾರದ ಭಯವಿಲ್ಲದೆ ತಮ್ಮನ್ನು ಸಂಘಟಿಸುವ ಅವಕಾಶ ನೀಡುವ ಸೂಕ್ತ ಕಾನೂನು ಕ್ರಮ ಅಗತ್ಯ ಎಂಬುದು ಎ.ಐ.ಕೆ.ಎಸ್. ಒತ್ತಾಯ.

ಕನಿಷ್ಟ ಕೂಲಿ

ಕನಿಷ್ಟ ಕೂಲಿ ಕುರಿತಾದ ಕೆಲವು ಶಾಸನಗಳು ಹೆಚ್ಚಿನ ರಾಜ್ಯಗಳಲ್ಲಿ ಇವೆಯಾದರೂ, ಈ ರೀತಿ ಒಮ್ಮೆ ನಿಗದಿ ಪಡಿಸಿದ ಕೂಲಿಗಳನ್ನು ಕಾಲಕಾಲಕ್ಕೆ ಪರಿಷ್ಕರಿಸುತ್ತಿಲ್ಲ. ಆದ್ದರಿಂದ ಬೆಲೆಯೇರಿಕೆಯಿಂದ ಜೀವನ ವೆಚ್ಚ ಏರುತ್ತಾ ಹೋದಂತೆ ಈ ಕೂಲಿಯ ನಿಜ ಮೌಲ್ಯ ತಗ್ಗುತ್ತಾ ಹೋಗುತ್ತದೆ. ಎಷ್ಟೋ ರಾಜ್ಯಗಳಲ್ಲಿ ಕನಿಷ್ಟ ಕೂಲಿ 10 ರೂ ಗಿಂತಲೂ ಕಡಿಮೆಯಿದೆ. ಕೇಂದ್ರ ಸರ್ಕಾರದ ಎನ್.ಆರ್.ಇ. ಅಥವಾ ಆರ್. ಎಲ್. ಜಿ. ಇ. ಪಿ. ಮುಂತಾದ ಸಾರ್ವಜನಿಕ ಕಾಮಗಾರಿಗಳಲ್ಲೂ ಕೂಡಾ ರಾಜ್ಯ ಸರ್ಕಾರ ನಿಗದಿ ಪಡಿಸಿದ ಕನಿಷ್ಟ ಕೂಲಿಗಿಂತ ಕಡಿಮೆ ಕೂಲಿ ನೀಡಲಾಗುತ್ತಿದೆ !

ಆದ್ದರಿಂದ ಕನಿಷ್ಟ ಕೂಲಿಯನ್ನು ವಾಸ್ತವಿಕ ದೃಷ್ಟಿಯಿಂದ ಆಹಾರದ ಮತ್ತು ಇನ್ನಿತರ ಮೂಲಭೂತ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ನಿಗದಿ ಪಡಿಸಬೇಕು, ಅವನ್ನು ಜೀವನ ವೆಚ್ಚ ಏರಿಕೆಗೆ ಅನುಗುಣವಾಗಿ ಕಾಲ ಕಾಲಕ್ಕೆ ಪರಿಷ್ಕರಿಸಬೇಕು ಮತ್ತು ಕಟ್ಟು ನಿಟ್ಟಾಗಿ ಜಾರಿಗೆ ತರಬೇಕೆಂದೂ, ಹಾಗೂ ಕೇಂದ್ರ ಸರ್ಕಾರವೇ ತನ್ನ ಕಾಮಗಾರಿಗಳಲ್ಲಿ ಕನಿಷ್ಟ ಕೂಲಿಯನ್ನು ನೀಡಿ ಮೇಲ್ಪಂಕ್ತಿ ಹಾಕಬೇಕೆಂದು ಎ.ಐ.ಕೆ.ಎಸ್. ಒತ್ತಾಯಿಸುತ್ತಿದೆ.

ಇದೇ ರೀತಿ ಕೃಷಿ ಕಾರ್ಮಿಕರ ಸಾಮಾಜಿಕ ಸ್ಥಾನಮಾನಗಳ ಪ್ರಶ್ನೆಯೂ ಕಡಿಮೆ ಮಹತ್ವದ್ದೇನಲ್ಲ. ಕೃಷಿ ಕಾರ್ಮಿಕರಲ್ಲಿ ಬಹಳಷ್ಟು ಮಂದಿ ಹರಿಜನ-ಗಿರಿಜನ ಕೋಮುಗಳಿಗೆ ಸೇರಿದ್ದು ಇವರ ಮೇಲೆ ಕೊಲೆ, ಮಾನಾಪಹರಣ ಮುಂತಾದ ಅತ್ಯಾಚಾರಗಳು ಹೆಚ್ಚುತ್ತಿವೆ. ಇವುಗಳಲ್ಲಿ ಮುಕ್ಕಾಲು ಭಾಗ ಕಾಂಗ್ರೆಸ್ [ಐ] ಆಳ್ವಿಕೆಯ ರಾಜ್ಯಗಳಲ್ಲೇ ನಡೆಯುತ್ತಿದೆಯೆಂಬುದು ಈಗ ಸಿದ್ಧವಾಗಿದೆ. ಈ ರಾಜ್ಯಗಳಲ್ಲಿ ಬಹಳಷ್ಟು ಇಂತಹ ಅತ್ಯಾಚಾರಗಳು ದಾಖಲಾಗುವುದೇ ಇಲ್ಲ. ಕಾರಣ ಪೋಲೀಸ್ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಶಾಮೀಲು.

ಜೀತ ಪದ್ಧತಿಯನ್ನು ಕಾನೂನಿನ ಪ್ರಕಾರ 1975 ರಲ್ಲೇ ರದ್ದು ಪಡಿಸಿದರೂ 1983ರಲ್ಲಿ ಸರ್ಕಾರದ ಬಳಿ 1,61,075 ಜೀತದಾಳುಗಳ ಪಟ್ಟಿಯಿತ್ತು. ಇದು ಕೂಡಾ ವಾಸ್ತವಿಕ ಸಂಖ್ಯೆಗಿಂತ ತುಂಬಾ ಕಮ್ಮಿಯೆಂಬುದು ಸ್ಪಷ್ಟ. ಆದರೂ ಜೀತದಾಳುಗಳನ್ನು ದುಡಿಸಿಕೊಂಡದ್ದಕ್ಕೆ ಶಿಕ್ಷೆಗೊಳಗಾದವರು ಕೇವಲ 673. ಇದೇ ರೀತಿ ಅಸ್ಪೃಶ್ಯತೆಯನ್ನು ಬಹಳ ಹಿಂದೇನೇ ಕಾನೂನುಬಾಹಿರ ಗೊಳಿಸಿದ್ದರೂ1982ರಲ್ಲೂ 4087 ಮಂದಿ ಅಸ್ಪೃಶ್ಯತೆಯ ಕಾನೂನು ಉಲ್ಲಂಘನೆ ವಿಚಾರಣೆಗೊಳಗಾಗಿದ್ದರು. ಇವರಲ್ಲಿ ಶಿಕ್ಷೆಗೊಳಗಾದವರ ಸಂಖ್ಯೆ ಕೇವಲ 199. ಅಂದರೆ 20ರಲ್ಲಿ ಒಬ್ಬರಿಗಿಂತಲೂ ಕಮ್ಮಿ.

ರೈತರ ಮತ್ತು ಕೃಷಿಕೂಲಿಕಾರರು ಸೆಪ್ಟೆಂಬರ್ ಚಳುವಳಿ ಕೇಂದ್ರೀಯ ಶಾಸನ, ಕನಿಷ್ಟಕೂಲಿ ಮತ್ತು ಹಳ್ಳಿಯ ಈ ಅತೀ ಬಡ ವಿಭಾಗದ ಪ್ರಜಾಸತ್ತಾತ್ಮಕ ಹಕ್ಕುಗಳ ಮಾನ್ಯತೆಯ ಬೇಡಿಕೆಯನ್ನು ಯಶಸ್ವಿಯಾಗಿ ಸಾಧಿಸಲು ದುಡಿಯುತ್ತದೆ. ○

ಏರುತ್ತಿರುವ ಕೃಷಿ ಕಾರ್ಮಿಕರ ಸಂಖ್ಯೆ

ಒಕ್ಕಲೆಬ್ಬಿಸಲ್ಪಟ್ಟಿರುವ ಸಣ್ಣ ಮತ್ತು ಅಂಚಿನಲ್ಲಿರುವ ರೈತರು ಮತ್ತು ಇತರ ನಿರುದ್ಯೋಗಿ ವಿಭಾಗಗಳು ಕೃಷಿಕೂಲಿಕಾರರ ವರ್ಗ ಸೇರುತ್ತಿವ ಪ್ರಕ್ರಿಯೆ ಮುಂದುವರಿಯುತ್ತಲೇ ಇದೆ. ಕೃಷಿಕಾರ್ಮಿಕರ ಸಂಖ್ಯೆ 1951ರಲ್ಲಿ 2.75 ಕೋಟಿ ಇತ್ತು 1961ರಲ್ಲಿ ಇದು 3.15 ಕೋಟಿಗೇರಿತು. 1981ರಲ್ಲಿ ಅದೀಗ 5.54 ಕೋಟಿ ಆಗಿದೆ. 1981ರ ಜನಗಣತಿ ಪ್ರಕಾರ ಕರ್ನಾಟಕದ ಕೃಷಿಕಾರ್ಮಿಕರ ಸಂಖ್ಯೆ 36.36ಲಕ್ಷ ಅತೀಹೆಚ್ಚು ಕೃಷಿಕಾರ್ಮಿಕರಿರುವ ರಾಜ್ಯಆಂಧ್ರಪ್ರದೇಶ 82.92ಲಕ್ಷ. ನಂತರ ಕ್ರಮವಾಗಿ ಬಿಹಾರ, ಮಧ್ಯಪ್ರದೇಶ, ತಮಿಳುನಾಡು ಮತ್ತು ಉತ್ತರಪ್ರದೇಶ ಬರುತ್ತವೆ.

ಕೃಷಿ ಕೂಲಿಕಾರರ ಮೇಲಿನ ಅತ್ಯಾಚಾರಗಳು

1983 ರಿಂದ 1985ರವರೆಗೆ ಹರಿಜನ-ಗಿರಿಜನರ ವಿರುದ್ಧ ಎಸಗಿದ ಅಪರಾಧಗಳ ಸಂಖ್ಯೆ ಹೀಗಿದೆ.

ರಾಜ್ಯ	1983	1984	1985
ಮಧ್ಯಪ್ರದೇಶ	8411	8101	8088
ಉತ್ತರ ಪ್ರದೇಶ	3857	4200	4138
ರಾಜಸ್ಥಾನ	2043	2046	1816
ಬಿಹಾರ್	1925	2	1673
ಈ ನಾಲ್ಕು ರಾಜ್ಯಗಳಲ್ಲಿ	16230	16395	15715
ಒಟ್ಟು ದೇಶದಲ್ಲಿ	19146	19051	19300
ಪಶ್ಚಿಮ ಬಂಗಾಳ	37	33	27
ತ್ರಿಪುರಾ	3	ಇಲ್ಲ	ಇಲ್ಲ

21ನೇ ಶತಮಾನ ಮತ್ತು ಜೀತದಾಳುಗಳು

ಉಚ್ಛ ತಂತ್ರ ಮತ್ತು ಎಲೆಕ್ಟ್ರಾನ್ ಯುಗದ ಬಗ್ಗೆ ಮಾತನಾಡುವ ಸರ್ಕಾರಕ್ಕೆ ಜೀತದಾಳುಗಳ ಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ಯಾವ ನಾಚಿಕೆಯೂಇದ್ದಂತಿಲ್ಲ

ಯೋಜನಾ ಆಯೋಗ ಮತ್ತು ಗಾಂಧೀ ಶಾಂತಿಪ್ರತಿಷ್ಠಾನದ ಜಂಟೀ ಸರ್ವೇಪ್ರಕಾರ ಜೀತದಾಳುಗಳ ಸಂಖ್ಯೆ 23ಲಕ್ಷದಿಂದ 1984ರಲ್ಲಿ 32.17ಲಕ್ಷಕ್ಕೇರಿದೆ. ಲೋಕಸಭೆಯಲ್ಲಿ ಕೊಟ್ಟ ಒಂದು ಉತ್ತರದ ಪ್ರಕಾರ ಇದುವರೆಗೆ ಗುರುತಿಸಲ್ಪಟ್ಟು ಬಿಡುಗಡೆ ಹೊಂದಿದವರ ಒಟ್ಟುಸಂಖ್ಯೆ ಕೇವಲ 1,89,184.

ಎಸ್. ಎಫ್. ಐ. ರಾಷ್ಟ್ರ ಸಮ್ಮೇಳನದ ಕರೆ

ಕ್ರೀಡೆ, ಸಮೂಹ ಮಾಧ್ಯಮ ಮತ್ತು ಸಂಸ್ಕೃತಿ

ಸಂಸ್ಕೃತಿ ಮತ್ತು ಕ್ರೀಡೆ ನೆನೆಗುದಿಗೆ ಬಿದ್ದಿರುವ ಎರಡು ಪ್ರಮುಖ ಅಂಶಗಳು ಕೇಂದ್ರಸರ್ಕಾರ ಸಂಸ್ಕೃತಿಯನ್ನು ತನ್ನ ಬಗಲಲ್ಲಿಟ್ಟುಕೊಂಡಿದ್ದರೆ, ಕ್ರೀಡೆ ಅಸಮರ್ಪಕ ಆಡಳಿತ, ಭ್ರಷ್ಟಾಚಾರದಲ್ಲಿ ಮುಳುಗೇಳುತ್ತಿದೆ. ಈ ಎರಡು ಪ್ರಮುಖ ಅಂಗಗಳಿಗೆ ಪುನಃ ಉಸಿರು ತುಂಬುವಂತೆ ಎಸ್.ಎಫ್.ಐ.ನ 6ನೇಯ ಅ.ಭಾರತಸಮ್ಮೇಳನ ಕರೆನೀಡಿದೆ. ಆ ನಿರ್ಣಯಗಳ ಸಾರವೇ ಈ ಲೇಖನ.

ಜನಪ್ರಿಯ ಸಾಹಿತ್ಯ, ಸಿನೆಮಾ, ಸಂಗೀತ ಅಥವಾ ರಂಗಭೂಮಿ ಯಾವುದಾದರಲ್ಲಾದರೂ ಆಗಿರಲಿ ಹಿಂಸೆ, ಅನೈತಿಕತೆ,ಭ್ರಮೆ,ರೋಚಕತೆಗಳೇ ಪ್ರಮುಖವಾಗಿದೆ. ಮತಾಂಧತೆ ಮತ್ತು ಇತರೆ ಹಿಂದುಳಿದ ಸಾಮಾಜಿಕ ಮೌಲ್ಯಗಳು ಕೆಲವೊಮ್ಮೆ ಇದಕ್ಕೆ ನೀರೆರೆಯುತ್ತಿವೆ.

ಇಂದಿನ ಪ್ರಾತಿನಿಧಿಕ ಸಾಹಿತ್ಯ, ಚಲನಚಿತ್ರಪತ್ರಿಕೆಗಳು, ಬಂಡವಾಳಶಾಹಿ ಜಗತ್ತಿನ ಮೌಲ್ಯಗಳನ್ನು ಪ್ರತಿಬಿಂಬಿಸುವ ಕಥೆ, ಕಾದಂಬರಿಗಳಿಂದ ತುಂಬಿದೆ. ಸಿನೆಮಾರಂಗ ಇಂದು ಸಮಾಜದ ವಿರುದ್ಧ ವ್ಯಕ್ತಿಯನ್ನು ಕಲೆ ಹಾಕುವಲ್ಲಿ, ವಾಸ್ತವದಿಂದ ಪರಕೀಯವಾದ ಚಿತ್ರಣ ಕೊಡುವ ಉದ್ದಿಮೆಯಾಗಿದೆ. ಸಮೂಹ ಹೋರಾಟಗಳಿಗಿಂತಲೂ ಒಬ್ಬ ವ್ಯಕ್ತಿಯ ಹೊಡೆದಾಟವೇ ಎಲ್ಲಾ ಸಮಸ್ಯೆಗಳಿಗೂ ಮದ್ದೆನ್ನುವಂತೆ ತೋರಿಸಲಾಗುತ್ತಿದೆ. ಜಾಹಿರಾತು, ಸಿನೆಮಾ, ಒಣಸಾಹಿತ್ಯಗಳಲ್ಲಿ ಮಹಿಳೆಯನ್ನು ವಿಕಾರ ಭಾವನೆಗಳನ್ನು ತೃಪ್ತಿಗೊಳಿಸುವ ಸರಕಿನಂತೆ ಚಿತ್ರಿಸಲಾಗುತ್ತಿದೆ. ಪಲಾಯನವಾದ ಮತ್ತು ಭ್ರಮೆ ಈ ಕನಸಿನ ಮಾರಾಟಗಾರರ ಮುಖ್ಯ ಸರಕುಗಳು ಅಮೇರಿಕಾದ ಶಿಥಿಲ ಸಂಸ್ಕೃತಿಯ ದೊಡ್ಡ ಪ್ರಭಾವವನ್ನು ಅವರ ಎಲೆಕ್ಟ್ರಾನಿಕ್ ಸಂಗೀತ ಅಥವಾ ಸಿನೆಮಾಗಳಲ್ಲಿ ಕಾಣಹುದು.

50 ವರ್ಷಗಳ ಹಿಂದೆಯೇ ಪ್ರೇಮ್‌ಚಂದ್ ಮತ್ತು ಇತರ ಪ್ರಗತಿಪರ ಬರಹಗಾರರು ರಷ್ಯನ್ ಕ್ರಾಂತಿ ಮತ್ತು ವಸಾಹತುಶಾಹಿ ವಿರುದ್ಧ ಹೋರಾಟದಿಂದ ಪ್ರೇರೇಪಿತರಾಗಿ ನವಜಾಗೃತಿಯನ್ನುಂಟು ಮಾಡಲು ಪ್ರಗತಿಪರ ಬಹರಗಾರರ ಸಂಘವನ್ನು ಸ್ಥಾಪಿಸಿದ್ದರು. ಈ ಸಂಘದ ಸಂಸ್ಥಾಪನಾ ಸಮ್ಮೇಳನದಲ್ಲಿ ಪ್ರೇಂಚಂದ್ ಮಾತನಾಡುತ್ತಾ "ಯಾವುದು ನಮ್ಮ ಬದುಕಿನ ಧಾರುಣ ದಿನಗಳನ್ನು ಸ್ಥೈರ್ಯದಿಂದ ಎದುರಿಸುವಂತೆ ಮಾಡುವುದಿಲ್ಲವೋ ಆ ಸಾಹಿತ್ಯ ನಮಗೆ ಉಪಯೋಗಕ್ಕೆ ಬರುವುದಿಲ್ಲ" ಎಂದಿದ್ದರು.

ಭಾರತ ತನ್ನ ಶ್ರೀಮಂತ ಸಂಸ್ಕೃತಿಯನ್ನು ವಸ್ತುಸಂಗ್ರಹಾಲಯದಲ್ಲಿ ಜೋಪಾನವಾಗಿ ಕಾಯ್ದಿಟ್ಟಿದೆ. ಜನಪರರ ಜನಪದ ಕಲೆಗಳನ್ನು ಮಹಾನ್ ಸಮಾರಂಭಗಳಲ್ಲಿಅಪ್ನಾ ಉತ್ಸವ್‌ಗಳಲ್ಲಿ ಮೆರೆಸುತ್ತಾ ಆ ಜನರ ಬಡತನವನ್ನು ನಿರ್ಲಕ್ಷಿಸುತ್ತಲೇ ಇದ್ದಾರೆ. ಇನ್ನೊಂದೆಡೆ ಲಾಭದತ್ತ ಕಣ್ಣುಹಾಕಿದ ಚಲನಚಿತ್ರರಂಗ ಹಾಗೂ ಪುಸ್ತಕ ಪ್ರಕಾಶನ ಸಂಸ್ಥೆಗಳು ಲೈಂಗಿಕತೆ ಮತ್ತು ಹಿಂಸೆಯೆಂಬ ಅಫೀಮನ್ನು ನೀಡುತ್ತಾ ತಮ್ಮ ಹಿಡಿತ ಸ್ಥಾಪಿಸಿದ್ದಾರೆ.

ಸರ್ಕಾರ ಈ ಎಲ್ಲವನ್ನು ಬೆಳೆಯಬಿಟ್ಟಿರುವುದು, ಹಾಗೂ ತನ್ನನಡೆಗಳಲ್ಲಿ ಪ್ರಜಾಪ್ರಭುತ್ವ ದೃಷ್ಟಿ ಹೊಂದಿಲ್ಲದಿರುವುದರಿಂದ ಇದುಅಪಾದನೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸರಕಾರವೇ ನಡೆಸುತ್ತಿರುವ ಅಕಾಡೆಮಿಗಳು ಜನರಿಂದ ತಮ್ಮ ಬೇರು ಕಡಿದುಕೊಂಡು ಕೆಲವೇ ಉನ್ನತ ವ್ಯಕ್ತಿಗಳ ಹಿಡಿತಕ್ಕೆ ಸಿಕ್ಕಿ ಹಾಕಿಕೊಂಡಿವೆ. ಅವರ ಎಲ್ಲಾ ಚಟುವಟಿಕೆಗಳೂ ಯಾವುದಾದರೂ ಉತ್ಸವ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭಗಳಿಗೇ ಮುಕ್ತಾಯವಾಗುತ್ತದೆ. ಇನ್ನೊಂದೆಡೇ ಆಳುವ ಪಕ್ಷವೇ ಭಾರತ ಭವನದಂತಹ ಸಂಸ್ಥೆಯ ಮೂಲಕ ಕವಿ, ಲೇಖಕರಿಗೆ ಹಣ ಸಹಾಯ ಮಾಡುತ್ತಾ ಅವರು ತನ್ನ ಹಿಂದೆ ಸುತ್ತುವಂತೆ ಮಾಡಿದೆ. ಚಲನಚಿತ್ರ ಮಂಡಳಿ, ಹಿಂಸೆ. ಅಶ್ಲೀಲತೆ ತಡೆಯಲು ಸೋತಿದೆ. ದೆಹಲಿಯಲ್ಲಿ ಅಶ್ಲೀಲ ಚಿತ್ರಗಳನ್ನು ಬಹಿರಂಗವಾಗಿ ಪ್ರದರ್ಶಿಸುತ್ತಿದ್ದಾರೆ.ಆದರೂ ಈ ಮಧ್ಯೆಕೆಲವು ನಿರ್ದೇಶಕರು,ನಟರು ವಾಸ್ತವ ಸಿನೆಮಾಗಳನ್ನು ನಿರ್ಮಿಸಿದರೂ ಚಿತ್ರ ಜಗತ್ತಿನ ಹಿಮ್ಮುಖ ಒತ್ತಡಗಳಿಗೆ ಬಲಿಯಾಗದಿರಲಿಲ್ಲ. ಪ.ಬಂಗಾಳದ ಎಡರಂಗ ಸರ್ಕಾರ ನಂದನ್ ಚಲನಚಿತ್ರ ಕೇಂದ್ರ ಮತ್ತು ಗಂಭೀರಚಿತ್ರ ನಿರ್ಮಾಪಕರಿಗೆ ಧನ ಸಹಾಯ ನೀಡುವುದರ ಮೂಲಕ ಹೊಸ ಹೆಜ್ಜೆಹಾಕಿದೆ. ಕೇಂದ್ರ ಸರ್ಕಾರದ ಹೊಸ ನೀತಿಯಂತೆ ಎನ್ .ಎಫ್. ಡಿ. ಸಿ. ಜಾರಿಗೆ ತಂದ ಮತ್ತೊಂದು ನೀತಿಯಿಂದಾಗಿ ಅನಿವಾಸಿ ಭಾರತೀಯರು ಹಣ ತೊಡಗಿಸಿ ಪಾಶ್ಚಿಮಾತ್ಯದೇಶಗಳಿಂದ ಚಿತ್ರಗಳನ್ನು ಆಮದು ಮಾಡುವ ಮತ್ತೊಂದು ವಿಚಾರಹೀನ ನಿಯಮಗಳನ್ನು ಮಾಡಿದೆ. ಇದು ಮೂರನೇಯ ದರ್ಜೆಯ ಅರೆ ಅಶ್ಲೀಲತೆಯ ಚಿತ್ರಗಳು ಒಳ ಹರಿಯುವಂತಾಗಿದೆ.

ಸಂಗ್ರಾಹನುವಾದ :
ಜಿ. ಎನ್. ಮೋಹನ್

ಆಕಾಶವಾಣಿ-ದೂರದರ್ಶನ

ಆಕಾಶವಾಣಿ ಮತ್ತು ದೂರದರ್ಶನ ಆಳುವ ವರ್ಗದ ಮುಖವಾಣಿಯಾಗಿ ಕೆಲಸ ಮಾಡುತ್ತಿದೆ. ದೂರದರ್ಶನವನ್ನು ಸರ್ಕಾರವು ವಿಸ್ತರಿಸಲು ಇಚ್ಛಿಸಿದೆ. ದೂರದರ್ಶನಕ್ಕೆ ಇತರೆ ಸಮೂಹ ಮಾಧ್ಯಮಗಳಿಗಿಂತ ಅತಿ ಹೆಚ್ಚು ಪ್ರೇಕ್ಷಕರಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಈ ಕೇಂದ್ರಿಕೃತಜಾಲವನ್ನು ರಾಜೀವ್‌ಗಾಂಧಿಯವರ ಮಹಾಮಹಾ ಸಾಧನೆಗಳನ್ನು ಪ್ರಚಾರ ಮಾಡಲು ಬಳಸಲಾಗುತ್ತಿದೆ. ಸುದ್ದಿ ಮತ್ತು ಪ್ರಚಾರ ಮಂತ್ರಿಮಂಡಲದ 'ಹೌದಪ್ಪ' ಗಳು ಪ್ರ.ಮಂತ್ರಿಯ ಕಾರ್ಯದರ್ಶಿ ಮಂಡಳಿಯೊಡನೆ ನೇರ ಸಂಬಂಧ ಹೊಂದಿದ್ದು ರಾಜಕೀಯ ಸೆನ್ಸಾರ್‌ಗಳನ್ನು ನಡೆಸುತ್ತದೆ. ಹಾಗೆಯೇ ಕಾರ್ಖಾನೆಗಳು ಉತ್ಪಾದಿಸುತ್ತಿರುವ ವ್ಯಾಪಾರೀಸರಕುಗಳ ಜಾಹೀರಾತುಗಳು ದೂರದರ್ಶನಕ್ಕೆ ಅಪಾರತೆರಿಗೆ ತಂದಿತ್ತಿದ. ಇದು ದೂರದರ್ಶನವನ್ನು ವಾಣಿಜ್ಯಸಂಸ್ಥೆಗಳಿಗೂ ಮಾರಿದಂತಾಗಿದೆ. ಇದುವಿದೇಶಿವಾಣಿಜ್ಯದಾರರಿಗೆ ದೂರದರ್ಶನವನ್ನು ಆಕ್ರಮಿಸಲು ನೆಲ ಹದ ಮಾಡಿಕೊಟ್ಟಂತಾಗಿದೆ. ಭವ್ಯ,ಆರಾಮ ಜೀವನವನ್ನು ಬಣ್ಣಿಸುವ ಈ ಜಾಹೀರಾತುಗಳು ನೋಡುವ ಬಳಕೆದಾರರಿಗೆ ಕೃತಕಅವಶ್ಯಕತೆಗಳನ್ನುಹುಟ್ಟುಹಾಕುತ್ತಾ ಮತ್ತೊಂದು ರೀತಿಯ ಜೀವನಕ್ರಮಕ್ಕೆ ಹಾದಿ ಮಾಡಿಕೊಡುತ್ತಿದೆ.

ಸ್ವಾಯತ್ತ ಸಂಸ್ಥೆ ಮಾಡಲು ಕರೆ

ಈ ಎಲ್ಲಾ ದೂರದರ್ಶನದ ಅವಗುಣಗಳನ್ನು ದೂರಮಾಡಲು ಆಕಾಶವಾಣಿ ಮತ್ತು ದೂರದರ್ಶನವು ಸ್ವಾಯತ್ತ ಸಂಸ್ಥೆಯಾಗಿ ಮಾರ್ಪಡಿಸಲು ಎಸ್. ಎಫ್. ಐ. ಕರೆ ನೀಡುತ್ತದೆ. ಸಮ್ಮೇಳನ ಮಾಧ್ಯಮಗಳಲ್ಲಿ ಬಿಂಬಿತವಾಗುತ್ತಿರುವ ಕೋಮು ಹಾಗೂ ಭಾಷಾಂಧತೆಯನ್ನು ತೀವ್ರವಾಗಿ ಪರಿಗಣಿಸುತ್ತದೆ. ಪ್ರತಿಕೆಗಳು ಹಲವೊಮ್ಮೆ ಬೇಕೆಂದೇ ಕುಟಿಲತೆಯಿಂದ ಭಾಷಾಭಾವೋದ್ರೇಕಗಳು ಉಲ್ಬಣವಾಗುವಂತೆಮಾಡುತ್ತದೆ ವಿವಿಧ ಏಕೋಧ್ಯಮಿಗಳಿಂದ ನಿಯಂತ್ರಿತವಾಗಿರುವ ಪತ್ರಿಕೆಗಳು ಮತ್ತೊಂದು ರೀತಿಯಲ್ಲಿ ಆಳುವ ವರ್ಗದ ತತ್ವಗಳನ್ನು ಪ್ರಸಾರ ಮಾಡುತ್ತದೆ.

ಅಭಿನಂದನೆ

ಬೂರ್ಜ್ವಾ ಸಂಸ್ಕೃತಿಯ ವಿರುದ್ಧ ಹೋರಾಡುತ್ತಲೇ ಜನ ಸಾಮಾನ್ಯರ ಬಳಿಗೆ ಕಲೆ, ಸಂಸ್ಕೃತಿಯನ್ನು ಕರೆದೊಯ್ಯುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ರಾಷ್ಟ್ರದ ವಿವಿದೆಡೆ ಹರಡಿರುವ ಹಲವು ಸಾಂಸ್ಕೃತಿಕ ಸಂಘಟನೆಗಳನ್ನು ಎಸ್.ಎಫ್.ಐ. ಅಭಿನಂದಿಸುತ್ತದೆಯಲ್ಲದೆ ವಿದ್ಯಾರ್ಥಿ ಸಮುದಾಯವು ಸಮೂಹ ಮತ್ತು ಪ್ರಜಾಪ್ರಭುತ್ವ ಸಂಸ್ಕೃತಿಯನ್ನು ಬಲಪಡಿಸಿ ಬೆಳೆಸಲು ಹಾಗೂ ಕೊಳೆತ,ಅಮಾನವೀಯ, ಅಸಹ್ಯ ಸಂಸ್ಕೃತಿಯನ್ನು ತಿರಸ್ಕರಿಸಲು ಕರೆ ನೀಡಿದೆ.

ಹೊಸ ಕ್ರೀಡಾ ನೀತಿ ಕುರಿತು

ಕ್ರೀಡೆ ಮತ್ತು ದೈಹಿಕ ಶಿಕ್ಷಣ ನಮ್ಮ ಬದುಕಿನ ಅವಶ್ಯಕ ಅಂಗಗಳು. ವಿಶ್ರಾಂತಿ, ಮನರಂಜನೆಯ ಜೊತೆಗೆ ಉತ್ತಮ ಆರೋಗ್ಯಕರ ದೇಹ ರಕ್ಷಿಸಲು ಕ್ರೀಡೆ ಅತ್ಯಗತ್ಯ. ಆತ್ಮವಿಶ್ವಾಸ ಶಿಸ್ತು, ಸಂಯಮಗಳಿಗೆ ಇದು ದಾರಿ ದೀಪ. ನೋಡುಗರಿಗೂ ಮನೋಲ್ಲಾಸ.

ಅಪಾರ ಜನ ಸಂಖ್ಯೆ ಹೊಂದಿರುವ ನಮ್ಮ ರಾಷ್ಟ್ರದಲ್ಲಿ ಕ್ರೀಡೆಗಳನ್ನು ಬೆಳೆಸಲು ಹಲವು ಅವಕಾಶಗಳಿವೆ. ಆದರೂ ಕ್ರೀಡೆ ಮತ್ತು ಆಟಗಳಲ್ಲಿ ತೊಡಗಿಸಿಕೊಳ್ಳಲು ನೀಡಿರುವ ಕನಿಷ್ಟ ಗಮನ, ಕೆಳ ಹಂತಗಳಲ್ಲಿ ಸೌಲಭ್ಯಗಳ ಕೊರತೆ, ಕೆಲವು ಕ್ರೀಡೆಗಳ ಬಗ್ಗೆ ತಾತ್ಸಾರ. ಅಧಿಕಾರ ದುರುಪಯೋಗ, ಭ್ರಷ್ಟಾಚಾರ, ಕ್ರೀಡಾ ನೀತಿ ಯೋಜಿಸುವಲ್ಲಿ ಕೊರತೆ ಇವು ಕ್ರೀಡೆಗಳನ್ನು ದುಃಸ್ಥಿತಿಗಿಳಿಸಿವೆ.

ಇತ್ತೀಚೆಗೆ ಸಿಯೋಲ್‌ನಲ್ಲಿ ನಡೆದ ಏಷ್ಯಾಡ್‌ನಲ್ಲಿ ಭಾರತ ನೀಡಿದ ಪ್ರದರ್ಶನ ಮಟ್ಟ ಇದಕ್ಕೊಂದು ಉತ್ತಮ ಉದಾಹರಣೆ. ಆಟದ ಮೈದಾನಗಳ ಕೊರತೆ ಇದ್ದರೆ ನಮ್ಮ ಸರ್ಕಾರ ಒಬ್ಬ ವ್ಯಕ್ತಿಯ ಮೇಲೆ ಕೇವಲ 2 ಪೈಸೆ ಕ್ರೀಡೆಗಾಗಿ ವೆಚ್ಚಮಾಡುತ್ತಿದೆ. ಕೆಲವರು ಕ್ರೀಡೆಗಳಲ್ಲಿ ಭಾಗವಹಿಸುವ ಅವಕಾಶದಿಂದ ವಂಚಿತರಾಗಿದ್ದರೆ, ಇನ್ನು ಕೆಲವರು ತಮ್ಮ ಸ್ವಪ್ರತಿಭೆಯಿಂದ ಮೇಲೆ ಬಂದು ಅಧಿಕಾರಿಗಳ ದುರ್ವ್ಯವಹಾರಗಳಿಂದ ನಿರಾಶರಾಗಿದ್ದಾರೆ. ಎಲ್ಲರಿಗೂ ಕ್ರೀಡಾವಕಾಶ ಮಾಡಿಕೊಡುವ ನಿಟ್ಟನಲ್ಲಿ ಸಾಮಾಜವಾದಿ ರಾಷ್ಟ್ರಗಳು ಸಾಧಿಸಿರುವ ಪ್ರಗತಿ ಗಣನೀಯ.

ರಷ್ಯ, ಕ್ಯೂಬ, ಜರ್ಮನಿ, ಜೆಕೋಸ್ಲೋವಾಕಿಯಾ ದೇಶಗಳು ಕ್ರೀಡಾ ಬೆಳವಣಿಗೆಗೆ ಗಮನ ನೀಡಿ ಅಲ್ಲಿನ ಪ್ರತಿಭೆಗಳನ್ನು ಉತ್ತೇಜಿಸುತ್ತಿವೆ. ಆ ರಾಷ್ಟ್ರಗಳು ಇಂದು ಕ್ರೀಡೆಗಳಲ್ಲಿ ಮಹತ್ತರ ಸ್ಥಾನದಲ್ಲಿವೆ.

ಆದ್ದರಿಂದಲೇ ಎಲ್ಲರಿಗೂ ಕ್ರೀಡೆಯ ಅವಕಾಶ ಸಿಗುವ ನಿಟ್ಟನಲ್ಲಿ ಎಸ್. ಎಫ್.ಐ. ಕ್ರೀಡೆ ಶಾಲಾಕಾಲೇಜುಗಳಲ್ಲಿ ಕಡ್ಡಾಯ ಶಿಕ್ಷಣದ ಅಂಗವಾಗಬೇಕು. ಎಲ್ಲಾ ಶಿಕ್ಷಣ ಸಂಸ್ಥೆ ಆಟದ ಮೈದಾನ ಹೊಂದಿರಬೇಕು. ಪ್ರತಿ ಜಿಲ್ಲೆಗಳಲ್ಲಿ ಕ್ರೀಡಾ ಕೇಂದ್ರ, ಕ್ರೀಡಾಳುಗಳಿಗೆ ಸ್ಕಾಲರ್ ಶಿಪ್ ಉದ್ಯೋಗಾವಕಾಶಗಳ ಮೂಲಕ ಪ್ರೋತ್ಸಾಹ, ಕ್ರೀಡೆಯ ಬಗೆಗಿನ ಪುಸ್ತಕಗಳ ಪ್ರಕಟಣೆ, ರಿಯಾಯಿತಿ ದರದಲ್ಲಿ ಮಾರಾಟ, ಕ್ರೀಡಾ ಲೈಬ್ರರಿ ಸ್ಥಾಪಿಸಿ, ನಿವೃತ್ತ ಕ್ರೀಡಾಳುಗಳಿಗೆ ರಕ್ಷಣೆ ಆಧಾರಗಳ ಮೇಲೆ ಹೊಸ ಪ್ರಜಾಪ್ರಭುತ್ವ ಕ್ರೀಡಾ ನೀತಿಯನ್ನು ರಚಿಸಲು ಸರ್ಕಾರಕ್ಕೆ ಕರೆ ನೀಡುತ್ತದೆ. ○

ರಾಷ್ಟ್ರೀಯ ಐಕ್ಯತಾ ದಿನಾಚರಣೆ

40 ವರ್ಷಗಳ ಹಿಂದೆ 1947ರ ಆಗಸ್ಟ 15 ರಂದು ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಂದ ಪಡೆದ ಸ್ವಾತಂತ್ರ್ಯದ ದಿನ ದೇಶದ ಪ್ರಜೆಗಳಲ್ಲಿ ಉತ್ಸಾಹ ಸಂಭ್ರಮ ಸಡಗರದ ವಾತಾವರಣಲ್ಲಿ ಪ್ರತಿಯೊಂದು ಮನೆ ಕಛೇರಿಗಳಮೇಲೆ ರಾಷ್ಟ್ರಧ್ವಜ ಹಾರಿತು. ನಾಲ್ವತ್ತು ವರ್ಷಗಳು ತುಂಬಿ ಸ್ವಾತಂತ್ರ್ಯದ ಇಂದಿನ ದಿನಗಳಲ್ಲಿ ಜನತೆಯಲ್ಲಿ ನಿರಾಶೆ, ಕುಂದಿದ ಉತ್ಸಾಹವನ್ನು ಕಾಣುತ್ತಿದ್ದೇವೆ. ಯಾವ ಉದ್ದೇಶಕ್ಕಾಗಿ ತ್ಯಾಗ ಬಲಿದಾನ ಗೈದು ಮುಗುಳ್ನಗೆಯಿಂದ ನೇಣುಗಂಬವನ್ನೇರಿದ ಮಹಾ ವೀರರ ಧ್ಯೇಯಗಳನ್ನು ಇಂದುಮಣ್ಣು ಪಾಲು ಮಾಡಿದ್ದಾರೆ. ಕಾ॥ ಸೂರಿ ಹೆಳಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದನ್ನು ನೆನಪಿಸಿದರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಯಾರ ನಾಯಕತ್ವವಿಲ್ಲದೆ ಇಡೀ ರಾಷ್ಟ್ರ ವ್ಯಾಪಿ ವ್ಯಾಪಕವಾದ ರೈತ-ಕಾರ್ಮಿಕ ವಿದ್ಯಾರ್ಥಿ, ಯುವಜನತೆಯ ಹೋರಾಟಗಳು ಬೆಳೆದು ಬರುವಾಗ ಆ ಹೋರಾಟವನ್ನು ಒಂದೇ ವರ್ಷದಲ್ಲಿ ಮಹಾತ್ಮಗಾಂಧಿ ಹಿಂತೆಗೆದುಕೊಂಡರು.

ಅಂತರರಾಷ್ಟ್ರೀಯವಾಗಿ ಇಟ್ಲರ್‌ನ ಸರ್ವನಾಶ, ಸಮಾಜವಾದಿ ರಷ್ಯಾದ ವಿಜಯ ಹಲವಾರು ದೇಶಗಳ ವಿಮೋಚನೆಗಳನ್ನು ಕಂಡ ಬ್ರಿಟಿಷ್‌ಗೆ ಭಾರತದಲ್ಲೂ ಜನತೆ ರಷ್ಯಾದ ಹಾದಿಯನ್ನು ಅನುಸರಿಸುವ ಸೂಚನೆಗಳನ್ನು ಕಂಡುಕೊಂಡರು. ಸಾಮ್ರಾಜ್ಯಶಾಹಿ, ಜಾತೀವಾದಿ -ಕೋಮುಗಲಭೆಗಳಿಗೆ ಕಾರಣವಾಗಿದೆ ಎಂದು ಕಾ॥ ಸೂರ್ಯನಾರಾಯಣರಾವ್ ಹೇಳಿದರು.

ದೇಶದ ಐಕ್ಯತೆ ಸಮಗ್ರತೆ ಗಂಡಾಂತರದಲ್ಲಿರುವ ಸಂದರ್ಭದಲ್ಲಿ ಡಿ. ವೈ. ಎಫ್. ಐ. ಅಖಿಲ ಭಾರತ ಮಟ್ಟದಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳನ್ನು ವಿವರಿಸಿದ ರಾಜ್ಯ ಕಾರ್ಯದರ್ಶಿ ಕಾ॥ಶಿವರಾಂ. ಕೇರಳದ ಮಾನವ ಸರಪಳಿ ದೇಶದಲ್ಲಿಯೇ ಇದು ಚಾರಿತ್ರಿಕ ದಾಖಲೆ ಎಂದರು. ಪ್ರಸಿದ್ದ ವಕೀಲರಾದ ಕಾ॥ ಹೆಚ್.ಎನ್. ನಾಗಮೋಹನದಾಸರು ಸಭೆಯಲ್ಲಿ ಮಾತನಾಡಿದರು. ಎಲ್ಲಾಜನ ವಿಭಾಗತಮ್ಮ ಹಕ್ಕುಗಳಿಗಾಗಿ ಹೋರಾಟದ ಮೂಲಕ ಜನಪರ ಸರ್ಕಾರಕ್ಕಾಗಿ ದುಡಿಯಬೇಕೆಂದು ಎಸ್.ಎಫ್.ಐ.ಉಪಾಧ್ಯಕ್ಷ ಕಾ॥ಎನ್. ರಾಜಣ್ಣ ವಿನಂತಿಸಿದರು. ಪ್ರಾರಂಭದಲ್ಲಿ ಕಾ॥ಶ್ರೀನಿವಾಸ ಸ್ವಾಗತಿಸಿ ಕಾ॥ಟಿ ಶಿವಶಂಕರ್ ಅಧ್ಯಕ್ಷತೆ ವಹಿಸಿದ್ದರು. ಕೊನೆಯಲ್ಲಿ ಕಾ॥ಡಿ.ಶಿವಶಂಕರ್ ವಂದನಾರ್ಪಣೆ ಅರ್ಪಿಸಿದರು. ವಿಶ್ವಶಾಂತಿ ರಾಷ್ಟ್ರೀಯ ಸಮಗ್ರತೆ, ಎತ್ತಿಹಿಡಿಯುವ ಬಿತ್ತಿ ಪತ್ರಹಿಡಿದು ಮೆರವಣಿಗೆ ನಡೆಸಿದ ಪಾಠಶಾಲೆಯ ಪುಟ್ಟಪುಟ್ಟ ಮಕ್ಕಳು 'ಭಾರತೀಯರೆಲ್ಲರೂ ಒಂದೇ ಒಂದೇ' 'ಭಾರತ ಛಿದ್ರವಾಗಲು ಬಿಡುವುದಿಲ್ಲ ಬಿಡುವುದಿಲ್ಲವೆಂದು' ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು. ನಗರಸಭೆಯು ಪಾಠಶಾಲೆಗೆ 'ದೂರದರ್ಶನ'ವನ್ನು ಕೊಡುಗೆಯಾಗಿ ಅಂದುನೀಡಿದೆ. ○

ಸೆಣಸಿಗಳಿಸಿದ ಸ್ವಾತಂತ್ರ್ಯ ನಮ್ಮದು

ಒಗ್ಗಟ್ಟಿನಿಂದ ಅದನ್ನು ರಕ್ಷಿಸಿಕೊಳ್ಳೋಣ, ಉಳಿಸಿಕೊಳ್ಳೋಣ.

ಎಲ್ಲಿ ಮನ ನಿರ್ಭೀತವೋ, ಎತ್ತಿದ ಶಿರವಲ್ಲಿ ಬಾಗದೋ
ಎಲ್ಲಿ ಜ್ಞಾನ ಸಂಚಯ ಮುಕ್ತ ಲಭ್ಯವೋ
ಎಲ್ಲಿ ವಿಶ್ವ ಛಿದ್ರ ಛಿದ್ರಗೊಂಡು, ಅತ್ತಲಿಂದ ಇತ್ತ ಒತ್ತುವ
ವಿಭಕ್ತ ಗೃಹದ ಗೋಡೆಗಳನ್ನು ಕಾಣದೋ
ಎಲ್ಲಿ ಸತ್ಯದರಿವಿನಾಳದಿಂದ ಪದ ಪುಂಜ ಸ್ತೋಮ ಹೊರ ಹೊಮ್ಮು
ವುದೋ ಎಲ್ಲಿ ತೋಳ ತೆಕ್ಕೆಗೆ ಪರಿಪೂರ್ಣತೆಯ ಸೆಳೆವಂಥ
ಸತತ ಶ್ರಮದ ಗೆಯ್ಮೆ ಸಾಧ್ಯವೋ
ಎಲ್ಲಿ ಸ್ಫುಟ ವಿಚಾರ ಸ್ರೋತವೊಂದು ಜಡವೃತ್ತಿಯ
ಮರಳುಗಾಡು ಸೇರಿ ಇಂಗಿ ಹೋಗದೋ
ಎಲ್ಲಿ ನನ್ನ ಮನವು ನಿನ್ನ ಅಣತಿಯಂತೆ ವ್ಯಾಪನಶೀಲ
ವಿಚಾರವಾಗಿ ವಿಕಸನಗೊಳ್ಳುವದೋ, ಕಾರ್ಯತತ್ಪರಗೊಳ್ಳುವದೋ
ಓ ತಂದೆ, ಬಡಿದೆಬ್ಬಿಸಿ ನನ್ನ ದೇಶವನೊಯ್ಯಿ
ಆ ಸ್ವಾತಂತ್ರ್ಯದ ಸ್ವರ್ಗಕ್ಕೆ

-ರವೀಂದ್ರನಾಥ ಠಾಕೂರ್
(ಇಂಗ್ಲೀಷಿನಿಂದ ಅನುವಾದ)

ಭಾರತ ದಾಸ್ಯ ಶೃಂಖಲೆಯಿಂದ ಕಳಚಿಕೊಂಡಿತು. ವಸಹಾತು ಶಾಹಿ ಅಳಿದು, ಸ್ವತಂತ್ರ ರಾಷ್ಟ್ರ ಉದಯಿಸಿತು. ಎಳೆಹರೆಯದ ರಾಷ್ಟ್ರ ಉತ್ಸಾಹದಿಂದ ಪುಟಿಯುತ್ತಾ ಇಪ್ಪತ್ತನೆಯ ಶತಮಾನದ ಹಾದಿಯಲ್ಲಿ ತನ್ನ ಅಸ್ತಿತ್ವ ಅಚ್ಚೊತ್ತುವ ಭರವಸೆ ಮೂಡಿಸಿತು. ಸ್ವಾತಂತ್ರ್ಯ ಪಡೆದು ನಲವತ್ತು ಮಹತ್ತರ ವರ್ಷಗಳು ಮುಗಿದಿವೆ.

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ವ್ಯಕ್ತಿಗಳು ದೇಶಕ್ಕಾಗಿ ತಮ್ಮ ಜೀವತೆತ್ತು ಅಜರಾಮರರಾದರು. ಮಹಾತ್ಮಗಾಂಧಿ ಅವರ ಪಾತ್ರ ಮಹತ್ತರ. ಅಹಿಂಸೆಯೆಂಬ ಜೀವನ ತತ್ವದೊಂದಿಗೆ ದೇಶದ ಅಂತಃಕರಣವನ್ನು ವಶಪಡಿಸಿಕೊಳ್ಳಬಹುದೆಂಬುದನ್ನು ವಿಶ್ವಕ್ಕೆ ತೋರಿದ ಮಹಾನುಭಾವರು ಇವರು.

ವಿಶ್ವವೇ ಹೆಮ್ಮೆಪಡಬಹುದಾದ ಕೆಲವರು ಮಹಾನ್ ಪುರುಷರ ಸಮುದಾಯಿಕ ಜೀವನದರ್ಶನದ ಫಲವಾಗಿ ಸ್ವತಂತ್ರ ಭಾರತ ಆಧುನಿಕ ಭಾರತ ಎನಿಸಿಕೊಂಡಿತು. ತಿಲಕ್, ಗೋಖಲೆ, ಗಾಂಧಿ, ರಾನಡೆ, ನೆಹರೂ ಹೀಗೇ ಇನ್ನಿತರರು ಇವರ ಶ್ರೇಣಿಗೆ ಸೇರುತ್ತಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಭಾರತ ಮೇಲೆ ಮೇಲಕ್ಕೆ ಏರಲುಇವರೆಲ್ಲ ಎಡೆಬಿಡದೆ ಶ್ರಮಿಸಿದರು ಎಲ್ಲರಿಗೂ ನ್ಯಾಯ ಸಂದಾಯವಾಗಬೇಕು. ಎಲ್ಲರೂ ಸಮಾನರು ಎಂದಾಗಬೇಕು. ನ್ಯಾಯಬದ್ಧ ನಡವಳಿಕೆ ಆದರ್ಶವಾಗಬೇಕು ಎನ್ನುವ ಮೌಲ್ಯಗಳಿಗೆ ಮನ್ನಣೆ ದೊರಕಿಸಿಕೊಟ್ಟರು.

ಈ ಬಗೆಯ ಭದ್ರ ಬುನಾದಿ ಇದ್ದುದರಿಂದಲೇ ಸ್ವಾತಂತ್ರ್ಯಾನಂತರ ಭಾರತದ ಅಭಿವೃದ್ಧಿಯ ವೇಗ ನಿಬ್ಬೆರಗಾಗುವಂತೆ ಹೆಚ್ಚಿತು. ಕೈಗಾರಿಕಾ ಕ್ಷೇತ್ರ ಮತ್ತು ತಂತ್ರಜ್ಞಾನಗಳನ್ನು ಮಾತ್ರ ಬೆಳೆಸಲಿಲ್ಲ : ಗ್ರಾಮ ಜೀವನ ಸುಧಾರಣೆ ಮತ್ತು ಸಮಾಜ ಕಲ್ಯಾಣ ಸಹಾ ಸಾಧ್ಯವಾಗುವಂತೆ ಸಂಯೋಜಿತ ಪ್ರಯತ್ನಗಳು ನಡೆದವು. ಬಡತನ ಅನಕ್ಷರತೆ ರೋಗರುಜಿನಗಳ ವಿರುದ್ಧ ಹೋರಾಡಲು ಸಂಪನ್ಮೂಲಕ್ಕಾಗಿ ತಡಕಾಡದ ತಾಣವೇ ಇಲ್ಲ.

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕವೂ ಧೀರೋದಾತ್ತ ಪಾತ್ರವಹಿಸಿತು. ಬ್ರಿಟಿಷರ ಬಿಗಿಮುಷ್ಟಿಯ ಆಡಳಿತದ ವಿರುದ್ಧ ಬಂಡೆದ್ದ ಪ್ರಸಂಗಗಳು 1800 ರಷ್ಟು ಹಿಂದೆಯೇ ನಡೆದುವು. ಇತಿಹಾಸದ ಪುಟಗಳ ನಾಡಿನ ಈ ಭಾಗದ ರಾಷ್ಟ್ರಭಕ್ತರ ಸಾಹಸಚರ್ಯೆ ಅಚ್ಚೊತ್ತಿದಂತೆ ಮೂಡಿದೆ. ಕಿತ್ತೂರು ರಾಣಿ ಚೆನ್ನಮ್ಮ, ಹೈದರ್ ಅಲಿ, ಟಿಪ್ಪುಸುಲ್ತಾನ್ ಇವರು ತೋರಿದ ಪ್ರತಿರೋಧ ಸದಾ ಕಾಲ ಸ್ಮರಣೀಯ, ಮುಂದೆ ಅಸಹಕಾರ ಚಳವಳಿ ಮತ್ತು ಅಹಿಂಸಾತ್ಮಕ ಆಂದೋಲನಗಳಲ್ಲಿ ಇಲ್ಲಿನ ಜನಸಮುದಾಯ ತಾನೇ ತಾನಾಗಿ ತೊಡಗಿಸಿಕೊಂಡಿತು. ಸಕ್ರಿಯವಾಗಿ ಪಾಲ್ಗೊಂಡಿತು.

ಸ್ವಾತಂತ್ರ್ಯ ಬಂದ ಮೇಲೂ ಶ್ರೀ ಸಾಮಾನ್ಯನ ಹಿತಸಾಧನೆಗೆ ಶ್ರಮಿಸಬೇಕೆಂಬ ಕರ್ನಾಟಕದ ಸರ್ವತ್ರ ಅಭಿಲಾಶೆಯು ರಾಷ್ಟ್ರೀಯ ತತ್ವಧಾರೆಯು ಬಿಂಬ ಸ್ವರೂಪವೇ ಆಗಿದೆ. ಸ್ವಾತಂತ್ರ್ಯದ ಫಲ ಏನಿದೆಯೋ ಅದನ್ನು ದುರ್ಬಲರಿಗೂ ಸಹಾ ಹಂಚಲು ಕರ್ನಾಟಕದಲ್ಲಿ ಒಂದಾದ ಮೇಲೆ ಒಂದರಂತೆ ಅಧಿಕಾರಕ್ಕೆ ಬಂದ ಸರ್ಕಾರಗಳು ಶಕ್ತಿ ಮೀರಿ ಶ್ರಮಿಸಿದೆ. ಪ್ರಸ್ತುತ ಸರ್ಕಾರವು ಸಮಾಜದ ದುರ್ಬಲ ವರ್ಗಗಳಿಗೆ ನೆರವಾಗುವ ವಿವಿಧ ಹೊಸ ಬಗೆಯ ಕಾರ್ಯಯೋಜನೆಗಳನ್ನು ಜಾರಿಮಾಡಿದೆ.

ಗ್ರಾಮದ ರಾಜ್ಯದ ಬುನಾದಿಯ ಮೇಲೆ ಆಡಳಿತ ಸಾಧ್ಯವಾಗಬೇಕು. ಎಂಬುದು ಗಾಂಧೀಜಿಯವರ ಕನಸಾಗಿದ್ದಿತು. ಆ ಕನಸನ್ನು ಪೂರ್ಣ ಪ್ರಮಾಣದಲ್ಲಿ ನನಸಾಗಿಸಲು ಶ್ರಮಿಸಿದ ಕರ್ನಾಟಕ ಸರ್ಕಾರಕ್ಕೆ ಸಂದಿದೆ. ಜಿಲ್ಲಾ ಪರಿಷತ್ತಿಗೆ ಈಚೆಗೆ ಚುನಾವಣೆ ಯಶಸ್ವಿ ಆಗಿ ನಡೆಯಿತು.

ನಲವತ್ತನೆಯ ಸ್ವಾತಂತ್ರ್ಯೋತ್ಸವ ಸಂಭ್ರಮದಲ್ಲಿ ಕರ್ನಾಟಕದ ಜನತೆ ಭಾರತದ ಜನರ ಜೊತೆ ಪಾಲ್ಗೊಳ್ಳುತ್ತಿದೆ. ಸ್ವಾತಂತ್ರ್ಯೋತ್ಸವ ಆಚರಣೆ ಜೊತೆಗೆ ನಮ್ಮೆಲ್ಲ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಿ ಶ್ರದ್ಧಾಂಜಲಿ ಅರ್ಪಿಸುತ್ತಿದೆ.

ಇಂದು ಭಾರತ ಎದುರಿಸುತ್ತಿರುವ ಸವಾಲುಗಳು ಹಲವಾರು. ದೇಶವು ಒಂದಾಗಿ ಉಳಿಯುವಂತೆ ನೋಡಿಕೊಳ್ಳಬೇಕಾಗಿದೆ. ಉಗ್ರವಾದಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ಅಲ್ಲಲ್ಲಿ ತಲೆ ಎತ್ತುತ್ತಿವೆ. ಇಂತಹ ಸಮಯದಲ್ಲಿ ಭಾರತದ ಜನರೆಲ್ಲರೂ ಒಗ್ಗಟ್ಟಾಗಿದ್ದು ನಾವೆಲ್ಲರೂ ಭಾರತೀಯರು ಎಂಬ ಭಾವೈಕ್ಯತೆಯನ್ನು ಸಂರಕ್ಷಿಸಿಕೊಳ್ಳುವುದೇ ಸಧ್ಯದ ಪರಮ ಗುರಿ.

— ಕರ್ನಾಟಕ ವಾರ್ತೆ

ಸರಿಯಾದ ರೇಷನ್ ವಿತರಣೆಗಾಗಿ ಹೋರಾಟ

ಮಾರ್ಕ್ಸವಾದಿ ಕಮ್ಯುನಿಸ್ಟ ಪಕ್ಷದ ಘಟಕವು ದೊಡ್ಡಬಳ್ಳಾಪುರದಲ್ಲಿ ಸೀಮೆಎಣ್ಣೆ ಮತ್ತು ಸರಿಯಾದ ರೇಷನ್ ವಿತರಣೆಗಾಗಿ ತಾಲ್ಲೂಕು ಕಛೇರಿ ಪಿಕೆಟಿಂಗ್ 17-8-87 ರಂದು ನಡೆಸಲಾಯಿತು. ಪಕ್ಷವು ಪಡಿತರ ಪದ್ಧತಿಗಾಗಿ ಹೋರಾಟ ನಡೆಸಿ ಜಾರಿಗೆ ತಂದಿದ್ದರು. ಪ್ರಾಣಿಗಳು ಸಹ ತಿನ್ನಲಾರದಂಥ ಅಕ್ಕಿ ಮತ್ತು ಇನ್ನಿತರ ವಸ್ತುಗಳನ್ನು ವಿತರಿಸುವುದರ ವಿರುದ್ಧ ಸೀಮೆಎಣ್ಣೆ ಮತ್ತು ಪಾಮೋಲೀನ್ ಎಣ್ಣೆ ಸಿಗದೆ ತುಂಬಾ ತೊಂದರೆಯಾಗಿದ್ದಾರ ವಿರುದ್ಧ ಮೆರವಣಿಗೆ ಹೊರಟು, ತಹಶಿಲ್ದಾರರಿಗೆ ಮನವಿಕೊಡಲಾಗಿತ್ತು ಮೆರವಣಿಗೆ ಪ್ರಾರಂಭದಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಕಾಂ|| ರಾಮಭದ್ರಯ್ಯ ಮಾತನಾಡಿದರು. ಮೆರವಣಿಗೆ ನೇತೃತ್ವವನ್ನು ಕಾಂ||ಮುಗವಾಳಪ್ಪ, ಕಾಂ||ವಿ.ವಿ.ರಮೇಶ್ ವಹಿಸಿದ್ದರು. ಮನವಿ ಸ್ವೀಕರಿಸಿದ ಅಧಿಕಾರಿಗಳು ಪಾಮೋಲಿನ್ ಎಣ್ಣೆಯನ್ನು ನ್ಯಾಯ ಬೆಲೆ ಅಂಗಡಿಗಳ ಮೂಲಕ ಮೂರು ಕಡೆ ಹಂಚುವುದಾಗಿ ಮತ್ತು ಸೀಮೆಎಣ್ಣೆ ಕಾಳಸಂತೆಕೋರರನ್ನು ಶಿಕ್ಷಿಸುವುದಾಗಿ ಭರವಸೆ ನೀಡಿದರೆಂದು ಕೃಷ್ಣಮೂರ್ತಿ ತಿಳಿಸಿದರು. ಪಕ್ಷದ ಸಂಚಾಲಕ ಕಾಂ||ಗೋಪಾಲ್ ವಂದಿಸಿದರು.

ದ. ಆಫ್ರಿಕಾ ಗಣಿ ಕಾರ್ಮಿಕರ ಮುಷ್ಕರ

ದಕ್ಷಿಣ ಆಫ್ರಿಕಾದ ಸುಮಾರು 3ಲಕ್ಷ ಕರಿಯ ಗಣಿಕಾರ್ಮಿಕರು ಕಳೆದ ಸೋಮವಾರ (ಆಗಸ್ಟ್ 10) ದಿಂದ ಮುಷ್ಕರದಲ್ಲಿ ತೊಡಗಿದ್ದಾರೆ. ಕನಿಷ್ಟ 46 ಚಿನ್ನದ ಹಾಗೂ ಕಲ್ಲಿದ್ದಲು ಗಣಿಗಳಲ್ಲಿ ಇದರಿಂದ ಕೆಲಸ ನಿಂತಿದೆಯೆಂದು ತಿಳಿದು ಬಂದಿದೆ. ಇದು ದಕ್ಷಿಣ ಆಫ್ರಿಕಾದ ಅತ್ಯಂತ ವ್ಯಾಪಕ ಮುಷ್ಕರ, ರಾಷ್ಟ್ರೀಯ ಗಣಿಕಾರ್ಮಿಕರ ಸಂಘದ ಸದಸ್ಯರಲ್ಲದವರು ಕೂಡಾ ಇದರಲ್ಲಿ ಭಾಗವಹಿಸುತ್ತಿದ್ದಾರೆ. ಇದು ದಕ್ಷಿಣ ಆಫ್ರಿಕಾದ ಜನ ಸಮೂಹಗಳಲ್ಲಿ ಹೆಚ್ಚುತ್ತಿರುವ ರಾಜಕೀಯ ಪ್ರಜ್ಞೆಯ ದ್ಯೋತಕ ಎಂದು ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷ ಆಲಿವರ್ ತಾಂಬೋ ಹೇಳಿದ್ದಾರೆ. ಜನಾಂಗದ್ವೇಷಿ ಸರ್ಕಾರ ಈಗಾಗಲೇ ಹಲವಾರು ಗಣಿ ಕಾರ್ಮಿಕ ಮುಖಂಡರನ್ನು, ಸಕ್ರಿಯ ಕಾರ್ಯಕರ್ತರನ್ನು ಕೊಲೆಯ ಪ್ರಯತ್ನ ನಡೆಸಿದರೆಂಬ ಸುಳ್ಳು ಆಪಾದನೆ ಹೊರಿಸಿ ಬಂಧಿಸಿದೆ.

ಈ ನಡುವೆ ವಿಶ್ವರಾಷ್ಟ್ರ ಸಂಸ್ಥೆಯಲ್ಲಿ ಅಧಿವೇಶನದಲ್ಲಿರುವ ವಸಾಹತುಗಳನ್ನು ವಿಸರ್ಜಿಸುವ ವಿಶ್ವಸಂಸ್ಥೆಯ ವಿಶೇಷ ಸಮಿತಿಯ ಆರು ಸದಸ್ಯರು ಮಂಡಿಸಿದ ಒಂದು ಠರಾವು ವಿಶ್ವ ಬ್ಯಾಂಕನ್ನು ಅದು ಜನಾಂಗದ್ವೇಷಿ ಬೋಥಾ ಸರ್ಕಾರದೊಡನೆ ಹಣಕಾಸಿನ ಹಾಗೂ ತಾಂತ್ರಿಕ ಸಂಬಂಧ ಇಟ್ಟುಕೊಂಡಿದ್ದಕ್ಕಾಗಿ ತೀವ್ರವಾಗಿ ಖಂಡಿಸಿದೆ. ಅದೇ ವೇಳೆಗೆ ಅಲಿಪ್ತ ದೇಶಗಳು ರಚಿಸಿರುವ 'ಆಫ್ರಿಕಾನಿಧಿ'ಯನ್ನು ಸ್ವಾಗತಿಸಿದೆ. ಅಫಘಾನಿಸ್ತಾನ' ಇರಾನ್. ಸಿರಿಯಾ, ಕ್ಯೂಬಾ, ಬಲ್ಗೇರಿಯಾ ಈ ನಿರ್ಣಯವನ್ನು ಮಂಡಿಸಿದವು. ●

ಸಿ. ಐ. ಎ. : ಅನೀತಿಯುತ ನಲತ್ತು ವರ್ಷಗಳು

ಅಮೇರಿಕಾದ ಕುಖ್ಯಾತ ಸೆಂಟ್ರಲ್ ಇಂಟೆಲಿಜೆನ್ಸ್ ಏಜೆನ್ಸಿ ತನ್ನ ನಲ್ವತ್ತು ವರ್ಷಗಳನ್ನು ಪೂರ್ಣಗೊಳಿಸಿದೆಯಂತೆ. ದ್ವಿತೀಯ ಮಹಾಯುದ್ಧ ನಂತರ ಜುಲೈ 1947ರಲ್ಲಿ ಇದನ್ನು ಅಧ್ಯಕ್ಷ ಟ್ರೂಮನ್ ಸ್ಥಾಪಿಸಿದರು. "ಶತ್ರು"ವಿನ ಬಗ್ಗೆ ಸುದ್ದಿ ಸಂಗ್ರಹ ಮಾತ್ರವೇ ಅಲ್ಲ, ಸೋವಿಯೆತ್ ಒಕ್ಕೂಟ ಮತ್ತು ಸಮಾಜವಾದೀ ಜಗತ್ತಿನ ವಿರುದ್ಧ ಬುಡಮೇಲು ಕೃತ್ಯಗಳನ್ನು ಸಂಘಟಿಸುವ ಮತ್ತು ಸಂಯೋಜಿಸುವ ಕೇಂದ್ರವಾಗುವುದು ಇದರ ಸ್ಥಾಪನೆಯ ಮುಖ್ಯ ಉದ್ದೇಶವಾಗಿತ್ತು. ಸಿ.ಐ.ಎ.ನ ಹಣಕಾಸಿನಲ್ಲಿ 10% ಕೂಡಾ ಸಾಂಪ್ರದಾಯಕ ಗುಪ್ತ ಮಾಹಿತಿಗಳಿಗಾಗಿ ಖರ್ಚಾಗುತ್ತಿಲ್ಲ. ಆದರೆ ಬಹುತೇಕ ಹಣ ಬುಡಮೇಲು ಕೃತ್ಯಗಳಿಗಾಗಿ ಖರ್ಚಾಗುತ್ತಿದೆ.

ದ್ವಿತೀಯ ಮಹಾಯುದ್ಧದ ನಂತರ ದಕ್ಷಿಣ ಯುರೋಪಿನಲ್ಲಿ ಬಲಪಂಥೀಯ ಸರ್ಕಾರಗಳ ಸರಣಿಯಾ ಇರುವಂತೆ ನೋಡಿಕೊಂಡದ್ದು, 1953ರಲ್ಲಿ ಇರಾನ್‌ನಲ್ಲಿ ಮೊಸಾದೇಗ್ ಸರ್ಕಾರವನ್ನು ಉರುಳಿಸಿ ಶಾಹಾನನ್ನು ಕೈಗೊಂಬೆ ಆಳರಸನನ್ನಾಗಿ ಮಾಡಿದ್ದು ಇತ್ಯಾದಿಯಿಂದ ಆರಂಭವಾದ ಸಿ.ಐ.ಎ.ನ ನೀತಿಹೀನ ದಾಖಲೆ ನಾಲ್ಕು ದಶಕದುದ್ದಕ್ಕೂ ಹರಡಿದೆ. ಫಿಡೆಲ್‌ಕ್ಯಾಸ್ಟ್ರೋ ಮೇಲೆ 24 ಕೊಲೆ ಪ್ರಯತ್ನಗಳು, ಲುಮುಂಭಾ ಕೊಲೆ, ಅಲೆಂಡೆ ಕೊಲೆ ಆ ಕರಾಳದಾಖಲೆಯಲ್ಲಿನ ಕೆಲವು ಪುಟಗಳಷ್ಟೇ. 1961 ಮತ್ತು 1976ರ ನಡುವೆ ತನಗೆ ಅಪ್ರಿಯವಾದ ಜಗತ್ತಿನ ರಾಜಕಾರಣಿಗಳ ವಿರುದ್ಧ, ಸರ್ಕಾರಗಳ ವಿರುದ್ಧ 900ಕ್ಕಿಂತಲೂ ಹೆಚ್ಚು ಪರೋಕ್ಷ ಕಾರ್ಯಾಚರಣೆ ನಡೆಸಿದ (ಕು) ಖ್ಯಾತಿ ಸಿ.ಐ.ಎ.ದ್ದು.

ಇನ್ನೊಂದು ಮುಖ್ಯ ಸಂಗತಿಯೆಂದರೆ ಸಿ.ಐ.ಎ.ನ ಕಾನೂನು ಬಾಹಿರ, ಅಮಾನುಷ ಕೃತ್ಯಗಳ ಬಗ್ಗೆ ಅಮೇರಿಕನ್ ಜನತೆಗೆ ತಿಳಿದದ್ದು ಕೇವಲ ಎಪ್ಪತ್ತರ ದಶಕದಲ್ಲಷ್ಟೇ. ಸ್ವತಃ ಅಮೇರಿಕಾದ ಅಧ್ಯಕ್ಷರೇ ಸಿ.ಐ.ಎ.ಗೆ ಒಂದು ಖಾಯಂ ಕೊಲೆಗಾರರ ತಂಡ ಏರ್ಪಡಿಸಲು ಹೇಳಿದ್ದರೆಂಬುದು ಸೆನೆಟ್ ನೇಮಿಸಿದ ಚರ್ಚ್ ಸಮಿತಿಯ ವಿಚಾರಣೆ ಕಾಲದಲ್ಲಿ ತಿಳಿದು ಬಂತು. "ಮೋಸ ಮತ್ತು ಕುತಂತ್ರಗಳ ಮೂಲಕ, ಗುಪ್ತ ಕೂಟ ನೀತಿ ಮತ್ತು ಕಾನೂನು ಬಾಹಿರ ಕ್ರಮಗಳ ಮೂಲಕ ತಮ್ಮ ಧೋರಣೆಗಳನ್ನು ಜ್ಯಾರಿಗೊಳಿಸುವುದನ್ನು ಅಮೇರಿಕಾದ ಸಂಸತ್ತಿನಿಂದ, ಕಾನೂನಿನಿಂದ ಮತ್ತು ಜನತೆಯಿಂದ ಅಡಗಿಸಿಡಲು ಅಮೇರಿಕಾದ ಅಧ್ಯಕ್ಷರುಗಳಿಗೆ ಇದೊಂದು ಅತ್ಯಂತ ಅನುಕೂಲ ಸಾಧಕವಾದ್ದರಿಂದ ಅದರ ಚಟುವಟಿಕೆಗಳು ವ್ಯಾಪಕಗೊಳ್ಳುತ್ತಿವೆ" ಎಂದು ಪಶ್ಚಿಮ ಜರ್ಮನಿಯ ಪತ್ರಿಕೆಯೊಂದು ಹೇಳಿದೆ. ●

ಮಧ್ಯ ಅಮೇರಿಕಾದಲ್ಲಿ ರೇಗನ್‌ಗೆ ಮುಖಭಂಗ

ಗ್ವಾಟೆಮಾಲಾನಲ್ಲಿ ನಡೆದ ಐದು ಮಧ್ಯ ಅಮೇರಿಕಾ ದೇಶಗಳ ಅಧ್ಯಕ್ಷರ ಸಭೆಯಲ್ಲಿ ಆಗಸ್ಟ್ 7 ರಂದು ಒಂದು ಹನ್ನೊಂದಂಶದ ಶಾಂತಿಒಪ್ಪಂದಕ್ಕೆಸಹಿ ಹಾಕಲಾಗಿದೆ. ಗ್ವಾಟೆಮಾಲಾ, ನಿಕಾರಗುವಾ, ಎಲ್‌ಸಾಲ್ವಡೊರ್, ಹೊಂಡುರಾಸ್ ಮತ್ತು ಕೋಸ್ಟಾರಿಕಾದ ಅಧ್ಯಕ್ಷರು ಸಹಿಹಾಕಿದ ಈ ಒಪ್ಪಂದದಲ್ಲಿ ಮುಖ್ಯ ಲಕ್ಷಣಗಳೆಂದರೆ ಪ್ರಾದೇಶಿಕ ಸಮರ ವಿರಾಮ, ಸಧ್ಯ ಯುದ್ಧನಿರತ ದೇಶಗಳಲ್ಲಿ ರಾಷ್ಟ್ರೀಯ ಹೊಂದಾಣಿಕೆಯ ಪ್ರಕ್ರಿಯೆ, ಪ್ರತಿಯೊಂದು ದೇಶದಲ್ಲಿ ಪ್ರಜಾಪ್ರಭುತ್ವದ ಭರವಸೆ ನೀಡುವ ಕ್ರಮ, ಅನಿಯಮಿತ ಸೇನೆಗಳಿಗೆ ಬಾಹ್ಯ ಬೆಂಬಲ ನಿಲುಗಡೆ ಮತ್ತು ಬಂಡುಕೋರರು ಯಾವುದೇ ದೇಶದ ಪ್ರದೇಶವನ್ನು ಬಳಸುವುದನ್ನು ನಿಲ್ಲಿಸುವುದು, ಇದಕ್ಕೆ ಮೊದಲು ರೇಗನ್ ಸೆಪ್ಟಂಬರ್ 30 ರಂದು ಮುಕ್ತಾಯಗೊಳ್ಳುವ ಕಾಂಟ್ರಾಗಳಿಗೆ ನೀಡುವ ಸಶಸ್ತ್ರ ಬೆಂಬಲವನ್ನು ಮುಂದುವರೆಸಲು ಒಂದು ನೆಪ ಹುಡುಕುವ ಉದ್ದೇಶದಿಂದ ನಿಕಾರಗುವಾ ಶಾಂತಿ ಯೋಜನೆಯೊಂದನ್ನು ಗ್ವಾಟೆಮಾಲಾದ ಸಭೆ ನಡೆಯುವ ಹಿಂದಿನ ದಿನ ಮಂಡಿಸಿದರು. 'ಕಾಂಟ್ರಾಗಳಿಗೆ ಬೆಂಬಲ ಹೆಚ್ಚಿಸುವ ಒಂದು ನಾಟಕ' ಎಂದು ಅಮೇರಿಕಾದ ಉದಾರವಾದಿಗಳೇ ಟೀಕಿಸಿರುವ ಈ ಯೋಜನೆ ತಕ್ಕ ಶಾಸ್ತಿ ಪಡೆದಂತಾಗಿದೆ. ಸಾವೊಪಾವ್ಲೋದಲ್ಲಿ ಸಭೆ ಸೇರಿದ ಎಂಟು ಲ್ಯಾಟಿನ್ ಅಮೆರಿಕನ್ ದೇಶಗಳ ವಿದೇಶ ಮಂತ್ರಿಗಳು ಕೂಡಾ ಈ ರೇಗನ್ ಪ್ರಸ್ತಾಪವನ್ನು ತಿರಸ್ಕರಿಸಿದ್ದಾರೆ.

ಆದರೂ ತನ್ನ 'ಯೋಜನೆ'ಯನ್ನು ಜಾರಿಗೊಳಿಸಲು ರೇಗನ್ ಆಡಳಿತ ಪ್ರಯತ್ನ ಮುಂದುವರಿಸುತ್ತದೆಂದು ಉಪಾಧ್ಯಕ್ಷ ಜಾರ್ಜ್‌ಬುಶ್ ಅಮೆರಿಕನ್ ಸಾಮ್ರಾಜ್ಯಶಾಹಿಗಳ ನಿಲುವಿಗೆ ತಕ್ಕಂತೇ ಆಗಿದೆಯಲ್ಲವೇ? ●

ನ್ಯೂಝಿಲೆಂಡ್‌ನಲ್ಲಿ ಲೇಬರ್ ಸರಕಾರ

ಆಸ್ಟ್ರೇಲಿಯಾ ಮತ್ತು ನ್ಯೂಝಿಲೆಂಡ್‌ನ ನಾಗರಿಕರು ತಮ್ಮ ದೇಶದ ಯುದ್ಧ ಮತ್ತು ಶಾಂತಿಗೆ ಸಂಬಂಧಪಟ್ಟಂತೆ ಅಮೇರಿಕಾದ ಬಾಲಹಿಡಿಯದೆ ಹೆಚ್ಚು ಸ್ವತಂತ್ರವಾದ ಧೋರಣೆ ವಹಿಸುವ ಸರ್ಕಾರ ಬಯಸುವಂತೆ ಕಾಣುತ್ತಿದೆ. ಆಸ್ಟ್ರೇಲಿಯಾದ ರಾಬರ್ಟ್ ಹಾಕ್‌ರವರ ಲೇಬರ್ ಸರ್ಕಾರದ ಆಳ್ವಿಕೆಯಲ್ಲಿ ಜನರ ಜೀವನ ಮಟ್ಟ ಇಳಿಮುಖವಾಗಿ, ನಿರುದ್ಯೋಗ ಬೆಳೆದರೂ ಕೂಡಾ ಅಮೆರಿಕಾ ಪರ ಪಕ್ಷಗಳಿಗಿಂತ ಇದೇ ಉತ್ತಮ ಎಂದು ತೀರ್ಪು ನೀಡಿದ್ದಾರೆ. ನ್ಯೂಝಿಲೆಂಡ್‌ನಲ್ಲಿ ಲೇಬರ್ ಪಕ್ಷದ ಮತ 2% ಕಡಿಮೆಯಾದರೂ ಡೇವಿಡ್‌ಲಾಂಗೇ ವಿರೋಧಿ ನ್ಯಾಶನಲ್ ಪಾರ್ಟಿಯ 41 ಸ್ಥಾನಗಳಿಗೆ ಪ್ರತಿಯಾಗಿ 56 ಸ್ಥಾನಗಳನ್ನು ಗಳಿಸಿ ಮತ್ತೆ ಮೂರುವರ್ಷಗಳ ಕಾಲ ಆಳುವ ಅವಕಾಶ ಪಡೆದಿದ್ದಾರೆ. ದ್ವಿತೀಯ ಮಹಾಯುದ್ಧದ ನಂತರ ಎರಡನೇ ಬಾರಿ ಸತತವಾಗಿ ಗೆದ್ದ ಪ್ರಥಮ ಲೇಬರ್ ಪ್ರಧಾನಿ ಲಾಂಗೆ ತಮ್ಮ ಆರ್ಥಿಕ ಸುಧಾರಣೆ ಮತ್ತು ಪರಮಾಣು-ವಿರೋಧಿ ಧೋರಣೆಗಳನ್ನು ಮುಂದುವರಿಸುವುದಾಗಿ ಹೇಳಿದ್ದಾರೆ. ●

ಪ. ಬಂಗಾಳ ಪಕ್ಷದ ಸಂಘಟನೆಯನ್ನು ಕ್ರೋಢೀಕರಿಸುವ ನಿರ್ಧಾರ

ಜುಲೈ 25 ರಿಂದ ಆಗಸ್ಟ್ 2 ರ ವರೆಗೆ ನಡೆದ ಸಿ. ಪಿ. ಐ.(ಎಂ) ನ ಪಶ್ಚಿಮಬಂಗಾಳ ರಾಜ್ಯ ಸಮಿತಿಯ ಸಭೆ ಕಳೆದ ಅಸೆಂಬ್ಲಿ ಚುನಾವಣೆಗಳಲ್ಲಿ ಜನತೆ ಮತ್ತೆ ತಮ್ಮ ಪೂರ್ಣನಂಬಿಕೆಯನ್ನು ವ್ಯಕ್ತಪಡಿಸಿದುದರಿಂದಾಗಿ ಹೆಚ್ಚಿರುವ ಪಕ್ಷದ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸಲು ಕೆಲವು ಕಾರ್ಯಕ್ರಮಗಳನ್ನು ರೂಪಿಸಿದೆ.

ಪಶ್ಚಿಮಬಂಗಾಳದಲ್ಲಿ ಸಿ. ಪಿ. ಐ. (ಎಂ)ನ ಗಣನೀಯ ಸಾಧನೆ ಈಗಾಗಲೇ ಸರ್ವವಿಧಿತ. ಈಗ ಅಲ್ಲಿ ಪಕ್ಷದ ಸದಸ್ಯರ ಸಂಖ್ಯೆ 1.5 ಲಕ್ಷ, ಸಹಾಯಕ ಸದಸ್ಯರ ಸಂಖ್ಯೆ 2.5 ಲಕ್ಷ ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಸದಸ್ಯತ್ವ ಒಂದು ಕೋಟಿ ತಲುಪಿದೆ. ಕೇಂದ್ರ ಸರ್ಕಾರದ ಜನ-ವಿರೋಧಿ ಪ್ರಜಾಪ್ರಭುತ್ವ ವಿರೋಧಿ ಮತ್ತು ಭ್ರಷ್ಟ ಚಟುವಟಿಕೆಗಳ ವಿರುದ್ಧ ಪಕ್ಷದ ಪ್ರಚಾರ ಪ್ರಕ್ಷೋಭೆಯ ಕೆಲಸಗಳನ್ನು ಇನ್ನೂ ಪರಿಣಾಮಕಾರಿಯಾಗಿ ನಡೆಸಲು' ತಪ್ಪುಗಳನ್ನು ತಿದ್ದಲು ಪಕ್ಷದ ಸಂಘಟನೆಯನ್ನು ಮರು ವ್ಯವಸ್ಥೆಗೊಳಿಸಲು ನಿರ್ಧರಿಸಲಾಯಿತು.

ಪಕ್ಷದ ಸದಸ್ಯರ ಸತತ ರಾಜಕೀಯ ಶಿಕ್ಷಣ ಕಾರ್ಯಕ್ರಮದ ಮೇಲೆ ಸಭೆ ಹೆಚ್ಚು ಒತ್ತು ಹಾಕಿತು. ಒಂದು ಸಂಘಟಿತ ರೀತಿಯಲ್ಲಿ ಸಿದ್ಧಾಂತ ಮತ್ತು ಆಚರಣೆಯ ಸಾಮರಸ್ಯವನ್ನು ತಿಳಿಸಲು ಪ್ರಯತ್ನಿಸಲಾಗುವುದು ವೈಯುಕ್ತಿಕ ದೃಷ್ಟಿಯಿಂದ ಕಾರ್ಯನಿರ್ವಹಿಸದೆ ಸಾಮೂಹಿಕವಾಗಿ ಕಾರ್ಯನಿರ್ವಹಿಸುವ ಬಗ್ಗೆ ಶಿಕ್ಷಣ ನೀಡಲಾಗುವುದು ಪಕ್ಷದ ಚಟುವಟಿಕೆಗಳ ನಿರೀಕ್ಷಣೆಯ ಕೆಲಸವನ್ನು ಚುರುಕುಗೊಳಿಸಲಾಗುವುದು.

ಬೂರ್ಜ್ವಾ ಪತ್ರಿಕೆಗಳ ಅಪಪ್ರಚಾರಕ್ಕೆ ತಕ್ಕ ಉತ್ತರ ನೀಡಲು ಪಕ್ಷದ ಪತ್ರಿಕೆಗಳ ಪ್ರಕಟನೆಗಳ ಪ್ರಸಾರವನ್ನು ಹೆಚ್ಚಿಸಬೇಕೆಂದು ಸಭೆ ನಿರ್ಧರಿಸಿತು. ಅಲ್ಲದೆ ರೂಪುಗೊಳ್ಳುತ್ತಿರುವ ಹೊಸ ಸಾಮೂಹಿಕ ಸಂಘಟನೆಗಳಿಗೆ ಸೂಕ್ತ ಮಹತ್ವ ನೀಡಿ, ಸರಿಯಾದ ಮುಖಂಡತ್ವ ನೀಡಬೇಕೆಂದು, ಪಕ್ಷದ ಜಿಲ್ಲಾ ಕೇಂದ್ರಗಳು ಹಾಗೂ ರಾಜ್ಯಕೇಂದ್ರವನ್ನು ಬಲಪಡಿಸಲು ಎಲ್ಲಕ್ಕೂ ಮಿಗಿಲಾಗಿ ಎಡರಂಗ ಐಕ್ಯತೆಯನ್ನು ಭದ್ರಗೊಳಿಸಲು ನಿರ್ಧರಿಸಲಾಯಿತು. ○

ಹರ್ಯಾಣ : ಗಲಭೆಕೋರರಿಗೆ ಸಿ. ಪಿ. ಐ. (ಎಂ) ಸವಾಲು

ಕಾಂಗ್ರೆಸ್ ಮಣ್ಣು ಮುಕ್ಕಿದ ಸುದ್ದಿ ಹರಡಿ, ದೇವಿಲಾಲ್ ಇನ್ನೇನು ಅಧಿಕಾರ ವಹಿಸಿಕೊಳ್ಳಬೇಕು. ಎನ್ನುವಷ್ಟರಲ್ಲಿ ಪಂಜಾಬಿನ ಲಪ್ಪಿ ಮತ್ತು ಹರ್ಯಾಣದ ಫತೇಹಾಬಾದ್‌ನ ದರಿಯಾಪುರ್‌ನಲ್ಲಿ ಬಸ್ ಪ್ರಯಾಣಿಕರ ಅಮಾನುಷ ಕೊಲೆ ದೇಶವನ್ನೇ ತಲ್ಲಣಗೊಳಿಸಿತ್ತು. ಇದರ ದುರ್ಲಾಭ ಪಡೆಯಲು ಹರ್ಯಾಣಾದಲ್ಲಿ ಹಲವೆಡೆ ಕಾಂಗ್ರೆಸ್ (ಐ) ಮತ್ತು ಬಿ.ಜೆ ಪಿ ಪ್ರಯತ್ನಿಸಿದವು. ಕೇಂದ್ರ ಮಂತ್ರಿಗಳಾದ ಬೂಟಾಸಿಂಗ್ ಮತ್ತು ಭಜನ್‌ಲಾಲ್ ರಾಜ್ಯ ಸರ್ಕಾರಕ್ಕೆ ತಿಳಿಸದೆ ಇದ್ದಕ್ಕಿದಂತೆ ಒಂದು ಕಾನೂನು ವ್ಯವಸ್ಥೆ ಸಮಸ್ಯೆ ಸೃಷ್ಟಿಸಿದರು. ಈ ವಾತಾವರಣದಲ್ಲಿ ಹರ್ಯಾಣಾದಲ್ಲಿ, ಮುಖ್ಯವಾಗಿ ಹಿಸ್ಸಾರ್‌ನಲ್ಲಿ ಸಿ. ಪಿ. ಐ. (ಎಂ) ಡಿ. ವೈ. ಎಫ್. ಐ., ಎಸ್. ಎಫ್. ಐ. ಮತ್ತು ಜನವಾದಿ ಮಹಿಳಾ ಸಮಿತಿಯ ಕಾರ್ಯಕರ್ತರ ಸಾಹಸದಿಂದಾಗಿ ಗಲಭೆಕೋರರು ಕಾನೂನನ್ನು ತಮ್ಮ ಕೈಗೆ ತಗೊಳ್ಳುವುದು ಅಸಾಧ್ಯವಾಯಿತು.

ಫತೇಹಬಾದಿನಲ್ಲಿ ಡಿ. ವೈ. ಎಫ್. ಐ. ಮುಖಂಡ ದೇವಿಲಾಲ್ ಮತ್ತು ಕಾರ್ಮಿಕ ಮುಖಂಡ ಪೂನಮ್ ಮಹಿಮಾರವರ ನೇತೃತ್ವದಲ್ಲಿ ಕೇವಲ 15 ಜನರ ತಂಡ 3-4 ಸಾವಿರ ಗಲಭೆಕೋರರ ತಂಡವನ್ನು ಎದುರಿಸಿ ಅಲ್ಪಸಂಖ್ಯಾತರನ್ನು ರಕ್ಷಿಸಿದರು. ಸಿ.ಪಿ.ಐ. (ಎಂ) ಕಾರ್ಯಕರ್ತರು ಐದು ಕುಟುಂಬಗಳು ಸಜೀವ ದಹನವಾಗುವುದನ್ನು ತಪ್ಪಿಸಿದರು.

ಜುಲೈ 18 ,ರಂದು ಹಿಸ್ಸಾರ್ ಪಟ್ಟಣದಲ್ಲಿ ಒಂದು ಭಾರೀ ಶಾಂತಿ ರ‍್ಯಾಲಿ ನಡೆಯಿತು. ಇದರಲ್ಲಿ ನೂರಾರು ಮಹಿಳೆಯರೂ ಸೇರಿದಂತೆ ಸಾವಿರಾರು ಮಂದಿ ಜಾತಿ ಕೋಮುಗಳ ಭೇದಭಾವವಿಲ್ಲದೆ ಭಾಗವಹಿಸಿ ಭಯೋತ್ಪಾದಕರನ್ನು 'ಗಲಭೆಕೋರರನ್ನು ಖಂಡಿಸಿದರು ○

ಡಿ. ವೈ. ಎಫ್. ಐ. ಅಧ್ಯಯನ ಶಿಬಿರ

ಡಿ. ವೈ. ಎಫ್.ಐ. ಸೊಂಡೂರು ತಾಲ್ಲೂಕು ಮಟ್ಟದ ಅಧ್ಯಯನ ಶಿಬಿರ ಜುಲೈ 11 ರಂದು ಕರೇಕುಪ್ಪ ಗ್ರಾಮದಲ್ಲಿ ನಡೆಯಿತು. ತಾಲೂಕಿನ ವಿವಿಧ ಗ್ರಾಮಗಳಿಂದ 35 ಪ್ರತಿನಿಧಿಗಳು ಶಿಬಿರದಲ್ಲಿ ಭಾಗವಹಿಸಿದರು.

"ದೇಶದ ರಾಜಕೀಯ ಪರಿಸ್ಥಿತಿ ಮತ್ತು ಯುವಜನರ ಸಮಸ್ಯೆ" ಎಂಬ ವಿಷಯದ ಕುರಿತು ಕಾ॥ಪ್ರಸನ್ನ ಕುಮಾರ್ ಹಾಗೂ 'ಡಿ ವೈ. ಎಫ್. ಐ. ಸ್ಥಾಪನೆಯ ಐತಿಹಾಸಿಕ ಹಿನ್ನೆಲೆ, ಕುರಿತು ಕಾ। ಜಂಬಯ್ಯನಾಯಕ ಮಾತನಾಡಿದರು. ಶಿಬಿರದ ಅಧ್ಯಕ್ಷತೆಯನ್ನು ಕಾ॥ ವೀರೇಶ್ ವಹಿಸಿದ್ದರು. ಕಾ॥ಈಶ್ವರ ವಂದನಾರ್ಪಣೆ ಮಾಡಿದರು.

ಹೊಸಪೇಟೆ

ಡಿ. ವೈ. ಎಫ್. ಐ. ಆಶ್ರಯದಲ್ಲಿ ಜುಲೈ 8 ರಂದು ಹೊಸಪೇಟೆಯ ಚಿತ್ರವಾಡಿಯಲ್ಲಿ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಡಿ. ವೈ. ಎಫ್. ಐ ಜಿಲ್ಲಾ ಕಾರ್ಯದರ್ಶಿ ಕಾ॥ಜಂಬಯ್ಯನಾಯಕ್ ಮಾತನಾಡಿದರು. ಹೊಸಪೇಟೆ ನಗರ ಸಮಿತಿ ಮುಖಂಡರುಗಳು ಸಭೆಯಲ್ಲಿ ಮಾತನಾಡಿ ಡಿ. ವೈ. ಎಫ್. ಐ. ದೇಶದ ಬೇರೆ ಬೇರೆ ಭಾಗಗಳಲ್ಲಿ ನಡೆಸುತ್ತಿರುವ ಹೋರಾಟಗಳನ್ನು ವಿವರಿಸಿದರು. ●

REG No. BGW-148 MAG (2) PRB DECR 319/-78-79

ಕೇರಳದಲ್ಲಿ 700 ಕಿ. ಮಿ. ಉದ್ದದ ಮಾನವ ಸರಪಳಿ

(1ನೇ ಪುಟದಿಂದ)

ರಾದ ಜಸ್ಟಿಸ್ ಚಂದ್ರಶೇಖರ್ ಮೆನೋನ್, ಜಸ್ಟಿಸ್ ನರೇಂದ್ರ, ಅಡ್ವೋಕೇಟ್ ಜನರಲ್ ಸುಧಾಕರನ್, ಮಾಜಿ ನ್ಯಾಯಾಧೀಶರಾದ ಜಸ್ಟಿಸ್ ಜಾನಕಿಯಮ್ಮ, ವರಿಷ್ಠ ನ್ಯಾಯಾಲಯದ ಮಾಜಿ ನ್ಯಾಯಾಧೀಶ ಹಾಗೂ ರಾಷ್ಟ್ರಪತಿ ಅಭ್ಯರ್ಥಿ ನಾ.ಮೂ. ವಿ. ಆರ್. ಕೃಷ್ಣ ಅಯ್ಯರ್, ಚಿತ್ರ ನಿರ್ದೇಶಕ ಅಡೂರು ಗೋಪಾಲಕೃಷ್ಣನ್, ಸುಪ್ರಸಿದ್ಧ ಸಿನೆಮಾ ನಟ ನಟಿಯರಾದ ಸುಕುಮಾರನ್, ವೇಣು ನಾಗವಳ್ಳಿ, ಮೋಹನ್‌ಲಾಲ್ ಮೊದಲಾದವರು ಕಲೆ, ಸಾಹಿತ್ಯ ಮತ್ತು ರಾಜಕೀಯ ಕ್ಷೇತ್ರದ ಪ್ರಸಿದ್ಧ ವ್ಯಕ್ತಿಗಳೆಲ್ಲ ತಮ್ಮ ತಮ್ಮ ಊರುಗಳಲ್ಲಿ ಮಾನವ ಸರಪಣಿಯೊಂದಿಗೆ ಕೈ ಜೋಡಿಸಿದರು. ಕೆ.ಪಿ.ಸಿ.ಸಿ (ಐ)ನ ಮಾಜಿ ಅಧ್ಯಕ್ಷ ಟಿ. ಓ. ಬಾವಾ, ಮುಸ್ಲಿಂಲೀಗ್‌ನ ಮಾಜಿ ಶಿಕ್ಷಣಮಂತ್ರಿ ಹಾಗೂ ಸ್ಪೀಕರ್ ಜಾಕಿರಿ ಅಹಮ್ಮದ್ ಕುಟ್ಟಿ, ಸಿ. ಪಿ. ಐ. ಬಿಟ್ಟು ಎಡರಂಗದ ಎಲ್ಲಾ ಮಂತ್ರಿಗಳೂ ಭಾಗವಹಿಸಿದರು. ಕೊಟ್ಟಾಯಂ ವಿಶ್ವವಿದ್ಯಾನಿಲಯದ ಉಪಕುಲಪತಿ, ಕನ್ನಡ ಪ್ರಸಿದ್ಧ ಲೇಖಕ ಡಾ||ಯು. ಆರ್. ಅನಂತಮೂರ್ತಿ ಅವರು ಈ ಚರಿತ್ರಾರ್ಹ ಕಾರ್ಯಕ್ರಮವನ್ನು ಮೆಚ್ಚಿಕೊಂಡು ಅದರಲ್ಲಿ ಪಾಲುಗೊಳ್ಳುವ ಹಂಬಲ ವ್ಯಕ್ತಪಡಿಸಿದರೂ, ಕಾಂಗ್ರೆಸ್ ರಾಜಕಾರಣಿಗಳು ಅವರಿಗೊಡ್ಡಿದ ಬೆದರಿಕೆಗೆ ಮಣಿದು ಹಿಂದೆ ಸರಿಯಬೇಕಾದದ್ದು ಶೋಚನೀಯ.

ಕಾಸರಗೋಡು ಜಿಲ್ಲೆಯಲ್ಲಿ

ಕಳೆದ ವರ್ಷ ನಿರುದ್ಯೋಗ ಸಮಸ್ಯೆಯ ವಿರುದ್ಧ ಡಿ. ವೈ. ಎಫ್. ಐ ನಡೆಸಿದ ಸಚಿವರನ್ನು ತಡೆಯುವ ಕಾರ್ಯಕ್ರಮದಲ್ಲಿ ಪೋಲೀಸರ ಗುಂಡೇಟಿಗೆ ಬಲಿಯಾದ ಕಾ.ಬಾಲಕೃಷ್ಣನ್ ನೆನಪಿಗಾಗಿ ಕಾಸರಗೋಡು ಬಸ್ ನಿಲ್ದಾಣದ ಬಳಿ ನಿರ್ಮಿಸಿದ್ದ ಮಂಟಪದಿಂದ ಪ್ರಾರಂಭವಾದ ಮಾನವ ಸರಪಣಿ ಕಾಸರಗೋಡು ಜಿಲ್ಲೆಯಲ್ಲಿ 58 ಕಿಲೋಮೀಟರ್ ಉದ್ದವಾಗಿತ್ತು. ಹದಿನೈದು ಸಾವಿರ ಮಹಿಳೆಯರನ್ನು ಸೇರಿದಂತೆ ಐವತ್ತು ಸಾವಿರ ಜನ ಭಾಗವಹಿಸಿದ್ದ ಈ ಸರಪಣಿಯ ಕೊನೆಯಲ್ಲಿ ಡಿ ವೈ.ಎಫ್.ಐ ನ ಅಖಿಲಭಾರತ ಪ್ರಧಾನ ಕಾರ್ಯದರ್ಶಿ ಕಾ||ಹನ್ನನ್ ಮುಲ್ಲಾ ನಿಂತಿದ್ದರು. ಅವರ ಪಕ್ಕದಲ್ಲಿ ಬಾಲಕೃಷ್ಣ ತಂದೆ, ತಾಯಿ, ಸಹೋದರಿಯರು· ಮುಖಂಡರಾದ ಕಾ||ಎಂ. ರಾಮಣ್ಣರೈ ಕಾ||ವಿ.ಕರುಣಾಕರನ್ ಮತ್ತು ಇತರ ಡಿ.ವೈ.ಎಫ್.ಐ. ಸಂಗಾತಿಗಳು ನಿಂತಿದ್ದರು.

ಸಂಜೆ ನಾಲ್ಕು ಗಂಟೆಗೆ ಮೊಳಗಿದ ಐಕ್ಯಗಾನದ ಹಿಮ್ಮೇಳಕ್ಕೆ ಸರಿಯಾಗಿ ಸಾಲು ಕಟ್ಟಿನಿಂತ ಜನಸ್ತೋಮವು ಐಕ್ಯತೆಯ ಪ್ರತಿಜ್ಞೆ ಕೈಗೊಂಡರು. ಆ ಬಳಿಕ ಕಾಸರಗೋಡು ನಗರದಲ್ಲೂ ಜಿಲ್ಲೆಯ ಇತರ ಹನ್ನೊಂದು ಕಡೆ ಸಾರ್ವಜನಿಕ ಸಭೆಗಳು ಜರುಗಿದವು ಜಡಿಮಳೆಯಲ್ಲೂ ಕದಲದೆ ನಿಂತಿದ್ದ ಜನತೆಯನ್ನು ಉದ್ದೇಶಿಸಿ ಕಾಸರಗೋಡಿನ ಸಭೆಯಲ್ಲಿ ಅ.ಭಾರತ ಪ್ರ.ಕಾರ್ಯದರ್ಶಿ ಕಾ||ಹನ್ನನ್ ಮುಲ್ಲಾ ಮಾತನಾಡಿ ದೇಶದ ಐಕ್ಯತೆಗೆ ಮಾರಕವಾಗಿ ವಿಚ್ಛಿದ್ರಕಾರಿ ಶಕ್ತಿಗಳು ತಾಂಡವವಾಡಲು ಕಾಂಗ್ರೆಸ್‌ನ ದೀರ್ಘಕಾಲದ ದುರಾಡಳಿತವೇ ಕಾರಣವೆಂದರಲ್ಲದೆ ನಾವಿಂದು ಜೋಡಿಸಿದ ಐಕ್ಯ ಮತ್ತು ಪರಸ್ಪರ ಪ್ರೀತಿವಿಶ್ವಾಸವನ್ನು ಬೆಸೆಯುವ ಸರಪಣಿ ದೇಶವನ್ನು ಬಿಗಿದು ಉಸಿರುಕಟ್ಟಿಸುತ್ತಿರುವ ಕಾಂಗ್ರೆಸ್ ಸಂಕೋಲೆಯನ್ನು ತುಂಡರಿಸಲಿದೆ ಯೆಂದರು.

ದೂರದರ್ಶನದ ಮಲತಾಯಿ ನೀತಿ

ಈ ದೇಶದ ಐಕ್ಯತೆಯ ರಕ್ಷಣೆಗಾಗಿ ಕೊನೆಯುಸಿರಿನತನಕ ಹೋರಾಡುವೆವೆಂದು ಪಣತೊಟ್ಟ ಮಾನವ ಸರಪಣಿಯ ವಾರ್ತೆಯನ್ನು ದೂರದರ್ಶನದಲ್ಲಿ ಪ್ರಸಾರ ಮಾಡದಂತೆ ಕೇಂದ್ರ ಸರಕಾರ ನಿರ್ದೇಶಿಸಿರುವುದು ಖಂಡನೀಯ. ಐಕ್ಯತೆಗೆ ಭಂಗ ತರುವಂತಹ ಕೋಮುವಾದಿಗಳ ಚಟುವಟಿಕೆಗಳಿಗೆ ದೂರದರ್ಶನ ಪ್ರಸಾರದಲ್ಲಿ ಅವಕಾಶನೀಡುವ ಕೇಂದ್ರಸರಕಾರ ದೇಶದ ಐಕ್ಯತೆಯ ಕುರಿತು ಜನತೆಯಲ್ಲಿ ಎಚ್ಚರ, ಕಾಳಜಿ ಮೂಡಿಸುವಂತಹ 'ಮಾನವ ಸರಪಣಿ' ಕಾರ್ಯಕ್ರಮಕ್ಕೆ ಪ್ರಚಾರ ನೀಡದಿರುವುದು ಅದರ ಸಂಕುಚಿತ ಪ್ರವೃತ್ತಿಗೆ ಸಾಕ್ಷಿಎಂದು ಕಮ್ಯುನಿಸ್ಟ್ ಪಕ್ಷದ ಸಂಸತ್ ಸದಸ್ಯರಾದ ಕಾಂ||ಎಂ.ಎ.ಬೇಬಿ ಕಾಂ||ಹನ್ನನ್‌ಮುಲ್ಲ, ಕಾಂ||ಸುರೇಶ್ ಕುರುಪ್ ಹಾಗೂ ಕಾಂ||ಕೆ.ಮೋಹನನ್ ಅವರು ಸಂಸತ್ತಿನ ಎರಡೂ ಸದನಗಳಲ್ಲಿ ಖಂಡಿಸಿ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ಸಿ. ಐ. ಟಿ. ಯು. ನ ಬಹಿರಂಗ ಸಭೆ

ಸಿ. ಐ. ಟಿ. ಯು. ನ ಆಶ್ರಯದಲ್ಲಿ ಜೂನ್ 28 ರಂದು ದಾಂಡೇಲಿಯಲ್ಲಿ ಬಹಿರಂಗ ಸಭೆ ನಡೆಯಿತು. ಸಿ. ಐ. ಟಿ. ಯು. ನ 6 ನೇ ಅಖಿಲಭಾರತ ಸಮ್ಮೇಳನದ ತೀರ್ಮಾನಗಳು ಮತ್ತು ವರದಿಯನ್ನು ಸಭೆಯಲ್ಲಿ ವಿವರಿಸಲಾಯಿತು. ಸಭೆಯನ್ನುದ್ದೇಶಿಸಿ ನಗರಸಭಾ ಸದಸ್ಯರಾದ ಕಾ||ಹರೀಶ್‌ನಾಯಕ್, ಪ್ಲೈವುಡ್ ವರ್ಕರ್ಸ್ ಯೂನಿಯನ್ನಿನ ಸಹಕಾರ್ಯದರ್ಶಿ ಕಾಂ||ಅಕ್ರಮಖಾನ್ ಸಿ. ಐ. ಟಿ. ಯು. ರಾಜ್ಯ ಕಾರ್ಯದರ್ಶಿ ಕಾ||ವಿ.ಜೆ.ಕೆ ನಾಯರ್ ಮುಂತಾದವರು ಮಾತನಾಡಿ ಕಾರ್ಮಿಕ ವರ್ಗದ ಮೇಲೆ ಪ್ರಾರಂಭವಾಗಿರುವ ಕೇಂದ್ರ ಸರ್ಕಾರದ ದಬ್ಬಾಳಿಕೆಯ ವಿರುದ್ಧ ಕಾರ್ಮಿಕರು ಪ್ರಬಲ ಹೋರಾಟ ನಡೆಸಲು ಸನ್ನದ್ಧರಾಗಬೇಕೆಂದು ಕರೆನೀಡಿದರು. ಸಾಮ್ರಾಜ್ಯಶಾಹಿಗಳಿಂದ, ಕೋಮುವಾದಿಗಳಿಂದ ದೇಶದ ಭದ್ರತೆಯ ಮೇಲೆ ಉಂಟಾಗಿರುವ ಗಂಡಾಂತರದ ವಿರುದ್ಧ ಹೋರಾಡಬೇಕೆಂದು ತಿಳಿಸಿದರು.

ದೇಶದ ಮುಂದಿಟ್ಟ 17 ಬೇಡಿಕೆಗಳು

(1ನೇ ಪುಟದಿಂದ)

ದ್ವಿದಳ ಧಾನ್ಯಗಳು, ಅಡಿಗೆ ಎಣ್ಣೆ, ಉಪ್ಪು. ಸಕ್ಕರೆ, ಸೌದೆ ಇದ್ದಲು, ಸೀಮೆ ಎಣ್ಣೆ, ಪ್ರಾಣ ಉಳಿಸುವ ಔಷಧಿಗಳು, ಬೆಂಕಿ ಪೊಟ್ಟಣ ಇತ್ಯಾದಿಗಳನ್ನು ಸಬ್ಸಿಡಿ ನೀಡಿ ಅಗ್ಗದ ಬೆಲೆಗಳಲ್ಲಿ ದೊರಕಿಸಿ ಕೊಡಬೇಕು. ಈ ಎಲ್ಲಾ ಸರಕುಗಳ ಮೇಲೆಅಬಕಾರಿ ಸುಂಕವನ್ನು ತೀವ್ರವಾಗಿ ಕಡಿತಗೊಳಿಸಿ, ಅವುಗಳ ಸಾಗಾಣಿಕೆಗೆ ಆದ್ಯತೆ ನೀಡುವುದು.

6. ಸರ್ಕಾರೀ ಸಂಸ್ಥೆಗಳ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಕೃಷಿ ಫಸಲುಗಳನ್ನು ಖರೀದಿಸಿ ಅವಕ್ಕೆ ಸರಿಯಾದ ಪ್ರತಿಫಲ ನೀಡುವ ಬೆಲೆ ಸಿಗುವಂತೆ ಮಾಡಬೇಕು.

7. ಸಾಮೂಹಿಕ ಬಳಕೆಯ ಸರಕುಗಳ ಉತ್ಪಾದನೆ ಹೆಚ್ಚಿಸಲು, ಸಣ್ಣ ಕಸಬುದಾರರು, ಗುಡಿ ಕೈಗಾರಿಕೆಗಳವರೂ ಸೇರಿದಂತೆ ಎಲ್ಲಾ ವಿಭಾಗಗಳಿಗೆ ಉದ್ಯೋಗವಕಾಶ ಹೆಚ್ಚಿಸಲು ಮತ್ತು ಸಾಂಪ್ರದಾಯಿಕ ಕೈಗಾರಿಕೆಗಳನ್ನು ರಕ್ಷಿಸಲು ಆರ್ಥಿಕ ಧೋರಣೆಗಳನ್ನು ಸಂಪೂರ್ಣವಾಗಿ ಪುನರ್ರಚಿಸಬೇಕು.

8. 'ಕೂಲಿಗಾಗಿ ಕಾಳು' ಯೋಜನೆಯನ್ನು ಮತ್ತೆ ಆರಂಭಿಸಿ, ವಿಸ್ತರಿಸಬೇಕು.

9. ಕೆಲಸದ ಹಕ್ಕನ್ನು ಸಂವಿಧಾನದಲ್ಲಿ ಒಂದು ಮೂಲಭೂತ ಹಕ್ಕಾಗಿ ಸೇರಿಸಬೇಕು.

10. ಶಿಕ್ಷಣದ ಹಕ್ಕು (ಪ್ರತಿಯೊಬ್ಬರಿಗೂ)

11. ಸದ್ಯದ ಭೂ ಸುಧಾರಣಾ ಶಾಸನಗಳಲ್ಲಿನ ಲೋಪದೋಷಗಳನ್ನು ನಿವಾರಿಸಿ ತ್ವರಿತವಾಗಿ ಅನುಷ್ಠಾನಕ್ಕೆ ತರಬೇಕು. ರಾಜ್ಯ ವಿಧಾನ ಮಂಡಲಗಳು ಅಂಗೀಕರಿಸಿದ ಭೂ ಸುಧಾರಣಾ ಶಾಸನಗಳಿಗೆ ತಕ್ಷಣ ಒಪ್ಪಿಗೆ ನೀಡಬೇಕು.

12. ರೈತರಿಗೆ ಅಗ್ಗದ ಸಾಲ ಹಾಗೂ ಕೃಷಿ ಸಾಮಗ್ರಿಗಳ ಪೂರೈಕೆ.

13. ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿಯ ಅನುಷ್ಠಾನಮತ್ತು ಗ್ರಾಮೀಣ ಜನರ ಜೀವನ ಮತ್ತು ದುಡಿಮೆಯ ಪರಿಸ್ಥಿತಿ ಉತ್ತಮಗೊಳಿಸಲು ಇತರ ಕ್ರಮಗಳು.

14. ಬರ ಪೀಡಿತ ಪ್ರದೇಶಗಳಲ್ಲಿ ಆಹಾರದಾಸ್ತಾನಿನ ಪೂರ್ಣ ಉಪಯೋಗ ಪಡೆದು ತುರ್ತಾದ ಪರಿಹಾರ ಕ್ರಮ ಕೈಗೊಳ್ಳುವುದು.

15. ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆಗಳನ್ನು ಬದಲಿಸಿ, ಎನ್.ಎಸ್.ಎ., ಎಸ್ಮಾ ಮುಂತಾದ ಕರಾಳ ಕ್ರಮಗಳನ್ನು ರದ್ದು ಮಾಡುವುದು ; ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿ ರೂಪಿಸಿದ ಬೇಡಿಕೆಗಳನ್ನು ಒಪ್ಪಿಕೊಳ್ಳುವುದು ; ಕೈಗಾರಿಕೆಗಳ ಮುಚ್ಚುವಿಕೆ ಮತ್ತು ಬೀಗಮುದ್ರೆಗಳನ್ನು ನಿಲ್ಲಿಸಲು ಪರಿಣಾಮಕಾರೀ ಕ್ರಮ.

16. ಆರ್ಥಿಕ ಸ್ವಾವಲಂಬನೆಯ ರಾಷ್ಟ್ರೀಯ ಧೋರಣೆಯನ್ನು ಮತ್ತೆ ಅಂಗೀಕರಿಸಿ ಬಡ ಮತ್ತು ದುಡಿಯುವ ವರ್ಗಗಳ ಹಿತಾಸಕ್ತಿಗಳನ್ನು ಬಲಿಗೊಟ್ಟು ಗುತ್ತೇದಾರಿಗಳನ್ನು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಆರ್ಥಿಕ, ಹಣಕಾಸಿನ ಮತ್ತು ಬಂಡವಾಳ ವಿನಿಯೋಗದ ಧೋರಣೆಗಳನ್ನು ಕೈಬಿಡುವುದು.

17. ಹರಿಜನರು, ಗಿರಿಜನರು, ಧಾರ್ಮಿಕ ಅಲ್ಪ ಸಂಖ್ಯಾತರು, ಮಹಿಳೆಯರು, ಮತ್ತು ಸಮಾಜದ ಇತರ ದುರ್ಬಲ ವಿಭಾಗಗಳ ಮೇಲೆ ಮುಂದುವರಿಯುತ್ತಿರುವ ಆರ್ಥಿಕ ಅನ್ಯಾಯ ಮತ್ತು ದೈಹಿಕ ಹಲ್ಲೆಗಳನ್ನು ಕೊನೆಗಾಣಿಸಲು ಶಕ್ತಿಶಾಲಿ ಕ್ರಮಗಳು.

ಸೆಪ್ಟೆಂಬರ್-1 ವಿಶ್ವಶಾಂತಿ ದಿನ,

[1ನೇ ಪುಟದಿಂದ]

ಯ ವಿಶಾಲ ವಿಭಾಗಗಳು ಅಂದಿನಿಂದ ಪ್ರತಿವರ್ಷ ಸೆಪ್ಟೆಂಬರ್ ಒಂದರ ಚಳುವಳಿ ಶಾಂತಿ ಹೋರಾಟದ ಅಂತರರಾಷ್ಟ್ರೀಯ ಐಕ್ಯತೆಯ ಸಂಕೇತವಾಗಿ ಆಚರಿಸುತ್ತಾ ಬಂದಿವೆ. ಅಣುಅಸ್ತ್ರಗಳ ಪೈಪೋಟಿಯಿಂದ ಪರಿಣಮಿಸುವ ದುರಂತಮಯುತ ಪರಿಣಾಮಗಳು ಮಾನವ ಕೋಟಿಯನ್ನು ಎದುರಿಸುತ್ತಿದ್ದು, ಇಂದು ಜನರನ್ನು ಸಾಮೂಹಿಕವಾಗಿ ನಾಶಮಾಡುವ ಶಸ್ತ್ರಾಸ್ತ್ರಗಳನ್ನು ನಿರ್ನಾಮ ಮಾಡುವುದು ಈ ಭೂಮಂಡಲದ ಸಮಸ್ತ ಜನರ ಪ್ರಥಮ ಕರ್ತವ್ಯವಾಗಿದೆ.

ಈ ವರ್ಷದ ಸೆಪ್ಟಂಬರ್ 1 ರಂದು ನ್ಯೂಯಾರ್ಕಿನಲ್ಲಿ ನಿಶ್ಯಸ್ತ್ರೀಕರಣ ಮತ್ತು ಬೆಳವಣಿಗೆಗಳ ನಡುವಣ ಸಂಬಂಧದ ಕುರಿತಾದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ವಿಶ್ವ ರಾಷ್ಟ್ರ ಸಂಸ್ಥೆಯ ಸದಸ್ಯರಾಷ್ಟ್ರಗಳು ಸಭೆ ಸೇರುತ್ತವೆ.

ನಿಶ್ಯಸ್ತ್ರೀಕರಣಕ್ಕೂ ಬೆಳವಣಿಗೆಗೂ ಇರುವ ಸಂಬಂಧ ಜೀವಂತವಾದುದು ಎಂಬುದನ್ನು ಕಾರ್ಮಿಕ ಸಂಘಗಳು ಎತ್ತಿ ತೋರಿಸಿವೆ. ಸಾಮ್ರಾಜ್ಯಶಾಹಿಗಳು ನಮ್ಮ ನೆರೆಹೊರೆಯ ದೇಶಗಳನ್ನು ಭಾರತದ ವಿರುದ್ಧ ಎತ್ತಿ ಕಟ್ಟುತ್ತಿರುವುದರಿಂದ ಭಾರತವು ಅಪಾರವಾದ ಹಣವನ್ನು ರಕ್ಷಣೆಗಾಗಿ ಉಪಯೋಗ ಮಾಡುತ್ತಿದ್ದು, ಪರಿಣಾಮವಾಗಿ ತೆರಿಗೆಗಳ ಹೆಚ್ಚಳ, ಕೊರತೆ ಹಣಕಾಸುಗಳಿಂದ ಜನರ ಜೀವನ ಕಷ್ಟವಾಗುತ್ತಿದೆ. ಒಂದು ಲಕ್ಷಕ್ಕಿಂತಲೂ ಹೆಚ್ಚು ಕೈಗಾರಿಕಾ ಘಟಕಗಳು, ರೋಗಗ್ರಸ್ತವಾಗಿ, ಮುಚ್ಚಿ ಹೋಗಿ, ಅನೇಕ ಲಕ್ಷಕಾರ್ಮಿಕರು ಬೀದಿಪಾಲಾಗಿದ್ದಾರೆ. ಬೆಳವಣಿಗೆಗೆ ಅಡ್ಡಿಯಾಗಿದೆ. ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಉಪಯೋಗವಾಗುವ ಕಾರ್ಮಿಕರ ದುಡಿಮೆಯಿಂದ ಉತ್ಪತ್ತಿಯಾದ ಸಂಪನ್ಮೂಲವು ಶಸ್ತ್ರಾಸ್ತ್ರಗಳ ಪೈಪೋಟಿಯಲ್ಲಿ ಶಸ್ತ್ರಾಸ್ತ್ರಗಳನ್ನು ತಯಾರಿಸುವುದಕ್ಕೆ ಖರ್ಚಾಗುತ್ತದೆ.

ಮಧ್ಯಮ ಶ್ರೇಣಿಯ ಕ್ಷಿಪಣಿಗಳನ್ನು ಯೂರೋಪಿನಿಂದ ತೆಗೆಯುವ ಬಗ್ಗೆ ಜಿನೀವಾದಲ್ಲಿ ಮಾತುಕತೆಗಳು ನಡೆಯುತ್ತಿವೆ, ಆದರೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿಗಳು ತಾರಾಯುದ್ಧದ ಸಿದ್ಧತೆಗಳನ್ನು ಮುಂದುವರಿಸುತ್ತಲೇ ಇದ್ದಾರೆ. ಮಧ್ಯಮಶ್ರೇಣಿಯ ಕ್ಷಿಪಣಿಗಳನ್ನು ಯೂರೋಪಿನಿಂದ ತೆಗೆಯುವ ಸೂಚನೆ ಬಂದುದು ಸೋವಿಯೆತ್ ಒಕ್ಕೂಟದಿಂದ ಎಂಬುದನ್ನು ಮರೆಯುವಹಾಗಿಲ್ಲ.

ಪ್ರಪಂಚದಲ್ಲಿ ಅನೇಕ ದೇಶಗಳಲ್ಲಿ ನಡೆಯುತ್ತಾ ಬಂದ ಶಾಂತಿ ಚಳುವಳಿಯು ಅಮೇರಿಕ ಸಂಯುಕ್ತ ಸಂಸ್ಥಾನಗಳಲ್ಲಿಯೇ ಜನಾಭಿಪ್ರಾಯವನ್ನು ಅಣು ಅಸ್ತ್ರಗಳ ಪ್ರಯೋಗದ ನಿಷೇಧದ ಪರವಾಗಿ ಬದಲಿಸಿವೆ. 1986ರ ಬೇಸಿಗೆಯಲ್ಲಿ ದಕ್ಷಿಣ ಅಮೇರಿಕದ ಪೆರು ದೇಶದ ರಾಜಧಾನಿ ಲಿಮಾ ನಗರದಲ್ಲಿ ನಡೆದ 'ಸಮಾಜವಾದಿ ಅಂತರರಾಷ್ಟ್ರೀಯ'ದ 27ನೇಯ ಅಧಿವೇಶನವು ಸಾಮ್ರಾಜ್ಯಶಾಹಿಗಳ 'ತಾರಾಯುದ್ಧ' ಯೋಜನೆಯನ್ನು ವಿರೋಧಿಸಿದೆ.

ಸೆಪ್ಟಂಬರ್ 1ರಂದು ಶಾಂತಿ ಚಳುವಳಿಯನ್ನು ಯಶಸ್ವಿಯಾಗಿ ನಡೆಸಬೇಕೆಂದು ಸಿ.ಐ.ಟಿ.ಯು. ಕರೆ ಕೊಟ್ಟಿದೆ. ಸಾಮ್ರಾಜ್ಯಶಾಹಿಗಳು ನಡೆಸುವ ಯುದ್ಧದಿಂದ ವಿನಾಶ ಇಲ್ಲವೇ ಗುಲಾಮಗಿರಿಯನ್ನು ಎದುರಿಸಬೇಕು ಎಂದು ಸಿ.ಐ.ಟಿ.ಯು. ಕಾರ್ಮಿಕರಿಗೆ ಎಚ್ಚರಿಕೆ ಕೊಟ್ಟಿದೆ.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone : 75331 Editor P· Ramachandra Rao Managing Editor : N. K. Upadhyaya